ವಿಜಯಪುರ | ಸಂಪುಟ 01 | ಸಂಚಿಕೆ 268 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಮಂಗಳವಾರ ಡಿಸೆಂಬರ್ 19, 2023



"ಸರ್ಕಾರ ರೂ.180 ಕೋಟಿ ಖರ್ಚು ಮಾಡಿದ ಜಾತಿ ಗಣತಿ ಸಮೀಕ್ಷೆಯ ಮೂಲ ಪ್ರತಿಯೇ ಕಳೆದುಹೋಗಿರುವುದು ಹಾಗು ಲಭ್ಯವಿರುವ ವರದಿಯಲ್ಲಿ ಸದಸ್ಯ ಕಾರ್ಯದರ್ಶಿಯ ಸಹಿ ಇರದಿರುವುದು ಆಯೋಗದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ."

– ಬಸನಗೌಡ ಪಾಟೀಲ, ಯತ್ನಾಳ
ಶಾಸಕರು, ವಿಜಯಪುರ ನಗರ

ಭದ್ರತಾ ಲೋಪದ ಬಗ್ಗೆ ಅಮಿತ್ ಶಾ ಪ್ರತಿಕ್ರಿಯೆಗೆ ಪಟ್ಟು | ಲೋಕಸಭೆಯ ಇತಿಹಾಸದಲ್ಲೇ ಅಚ್ಚರಿಯ ಬೆಳವಣಿಗೆ!

# ವಿಪಕ್ಷಗಳ 90 ಸಂಸದರ ಅಮಾನತು!

ನವದೆಹಲಿ: ಸಂಸತ್ತಿನ ಭದ್ರತಾ ಲೋಪದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸದನವನ್ನು ಉದ್ದೇಶಿಸಿ ಮಾತನಾಡಬೇಕೆಂದು ಒತ್ತಾಯಿಸಿ ಸಂಸತ್ತಿನಲ್ಲಿ ಪ್ರತಿಭಟನೆ ನಡೆಸಿದ 30 ಪ್ರತಿಪಕ್ಷಗಳ ಸಂಸದರನ್ನು ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಲೋಕಸಭೆಯಿಂದ ಅಮಾನತುಗೊಳಿಸಲಾಗಿತ್ತು. ಇದೀಗ ರಾಜ್ಯ ಸಭೆಯಿಂದ ಕೂಡ 46 ಸಂಸದರನ್ನು ಅಮಾನತು ಮಾಡಲಾಗಿದೆ. ಈ ಮೂಲಕ ಒಟ್ಟು 90 ಸಂಸದರನ್ನು ಅಧಿವೇಶನದಿಂದ ಅಮಾನತು ಮಾಡಲಾಗಿದ್ದು, ಲೋಕಸಭೆಯ ಇತಿಹಾಸದಲ್ಲೇ ಅಚ್ಚರಿಯ ಬೆಳವಣಿಗೆ ಎಂದು ಹೇಳಲಾಗಿದೆ.

ಸಂಸತ್ತಿನ ಭದ್ರತಾ ಲೋಪದ ಬಗ್ಗೆ ಗೃಹ ಸಚಿವರ ಹೇಳಿಕೆಗೆ ಒತ್ತಾಯಿಸಿದ 13 ವಿರೋಧ ಪಕ್ಷದ ಸಂಸದರನ್ನು ಕಳೆದ ವಾರ ಅಮಾನತು ಮಾಡಲಾಗಿತ್ತು. ಇದಲ್ಲದೆ ಇನ್ನೂ ಮೂವರು ಸಂಸದರನ್ನು ವಿಶೇಷಾಧಿಕಾರ ಸಮಿತಿ ವರದಿ ಬರುವವರೆಗೆ ಅಮಾನತುಗೊಳಿಸಲಾಗಿತ್ತು. ಇಂದು ಬೆಳಿಗ್ಗೆ ಸಂಸತ್ತಿನಲ್ಲಿ ಭದ್ರತಾ ಲೋಪದ ಬಗ್ಗೆ ಗೃಹ ಸಚಿವ ಅಮಿತ್ ಶಾ ಮಾತನಾಡುವಂತೆ ಪಟ್ಟು ಹಿಡಿದ 30 ಸಂಸದರನ್ನು ಅಮಾನತು ಮಾಡಲಾಗಿತ್ತು. ರಾಜ್ಯ ಸಭೆಯಲ್ಲೂ ಪ್ರತಿಪಕ್ಷಗಳ ಸಂಸದರು ಅಮಿತ್ ಶಾ ಹೇಳಿಕೆಗೆ ಪಟ್ಟು ಹಿಡಿದಿದ್ದು ರಾಜ್ಯ ಸಭೆಯಿಂದ ಕೂಡ 46 ಸಂಸದರನ್ನು ಅಮಾನತು ಮಾಡಲಾಗಿದೆ.

ರಾಜ್ಯಸಭೆಯಿಂದ ಕಾಂಗ್ರೆಸ್‌ನ ಜೈರಾಮ್ ರಮೇಶ್, ರಣದೀಪ್ ಸುರ್ಜೇವಾಲಾ ಮತ್ತು ಕೆಸಿ ವೇಣುಗೋಪಾಲ್ ಸೇರಿ 46 ಸಂಸದರನ್ನು ಅಮಾನತು ಮಾಡಲಾಗಿದೆ.



ಲೋಕಸಭೆಯಿಂದ ವಿಪಕ್ಷ ನಾಯಕ ಅಧೀರ್ ರಂಜನ್ ಚೌಧರಿ ಮತ್ತು ಉಪನಾಯಕ ಗೌರವ್ ಗೊಗೊಯ್, ತೃಣಮೂಲ ಸಂಸದರಾದ ಕಲ್ಯಾಣ್ ಬ್ಯಾನರ್ಜಿ, ಕಾಕೋಲಿ ಘೋಷ್ ದಸ್ತಿದಾರ್, ಸೌಗತ ರೇ, ಸತಾಬ್ದಿ ರಾಯ್ ಮತ್ತು ಡಿಎಂಕೆ ಸಂಸದರಾದ ಎ ರಾಜಾ ಮತ್ತು ದಯಾನಿಧಿ ಮಾರನ್ ಸೇರಿದ್ದಾರೆ.

ಅಮಾನತು ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅಧೀರ್ ರಂಜನ್ ಚೌಧರಿ, ಸರ್ಕಾರವು ಸರ್ವಾಧಿಕಾರದ ರೀತಿಯಲ್ಲಿ ವರ್ತಿಸುತ್ತಿದೆ ಮತ್ತು ಸಂಸತ್ತನ್ನು ಬಿಜೆಪಿ ಪ್ರಧಾನ ಕಚೇರಿಯಂತೆ ಪರಿಗಣಿಸುತ್ತಿದೆ. ಅಧಿವೇಶನ ಆರಂಭವಾದಾಗಿನಿಂದ ಪ್ರತಿಪಕ್ಷಗಳು ಸರ್ಕಾರಕ್ಕೆ ಸಹಕಾರ ನೀಡುತ್ತಿವೆ. ಆದರೆ ಸರಕಾರವು ಸರ್ವಾಧಿಕಾರದ ಉತ್ತುಂಗವನ್ನು ಮೀರಿದೆ. ಅವರಿಗೆ ಬಹುಮತವಿದೆ, ಅವರು ಅಧಿಕಾರವನ್ನು ಹಿಡಿದಿದ್ದಾರೆ. ಅವರು ಸಂಸತ್ತನ್ನು ಪಕ್ಷದ ಕಚೇರಿಯಂತೆ ನಡೆಸಲು ಬಯಸುತ್ತಾರೆ. ಆದರೆ ಅದು ಸಂಭವಿಸಬಾರದು ಎಂದು ಅವರು ಹೇಳಿದ್ದಾರೆ.

ಈ ಕುರಿತು ಮಾತನಾಡಿದ ಗೌರವ್ ಗೊಗೊಯ್, ಬಿಜೆಪಿ ಸರ್ಕಾರವು ಪ್ರತಿಪಕ್ಷಗಳನ್ನು ಕೆಡವಲು ಪ್ರಯತ್ನಿಸುತ್ತಿದೆ ಮತ್ತು ಗೃಹ ಸಚಿವರು ಭದ್ರತಾ ಲೋಪದ ಹೊಣೆಗಾರಿಕೆಯನ್ನು ತೆಗೆದುಕೊಳ್ಳಲು ಹೆದರುತ್ತಿದ್ದಾರೆ. ಲೋಕಸಭೆಯ ಹೊರಗೆ ತಮ್ಮ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ ಎಂದು ಹೇಳಿದ್ದಾರೆ.

## ಭ್ರೂಣ ಹತ್ಯೆ: ಸುಳಿವು ಕೊಟ್ಟವರಿಗೆ ರೂ.1ಲಕ್ಷ ಬಹುಮಾನ

ಉದಯರಶ್ಮಿ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ಭ್ರೂಣ ಹತ್ಯೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಮುಂದಾಗಿರುವ ಆರೋಗ್ಯ ಇಲಾಖೆ ಭ್ರೂಣ ಹತ್ಯೆ ಸುಳಿವು ನೀಡಿದವರಿಗೆ ರೂ.1 ಲಕ್ಷ ನಗದು ಬಹುಮಾನ ನೀಡುವುದಾಗಿ ಘೋಷಿಸಿದೆ. ಇದಲ್ಲದೇ ಸುಳಿವು ನೀಡುವವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದೆ.

ರಾಜ್ಯದ ಯಾವುದೇ ಭಾಗದ ಆಸ್ಪತ್ರೆಯಲ್ಲಿ ಭ್ರೂಣ ಲಿಂಗ ಪತ್ತೆ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರು ಸ್ಪಷ್ಟವಾಗಿ ಆರೋಗ್ಯ ಇಲಾಖೆಗೆ ಮಾಹಿತಿ ನೀಡಿದವರಿಗೆ ಒಂದು ಲಕ್ಷಣ ರೂಪಾಯಿ ಬಹುಮಾನ ಹಣ ನೀಡುತ್ತೇವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಸಾಂದರ್ಭಿಕ ಚಿತ್ರ


ಇನ್ನು ಸಾರ್ವಜನಿಕರ ಸಹಾಯಕ್ಕಾಗಿ ಆರೋಗ್ಯ ಇಲಾಖೆ ಸಹಾಯವಾಣಿ ತೆರೆದಿದ್ದು, 080-25202264/65ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ತಿಳಿಸಿದೆ.

ಹೆಣ್ಣು ಭ್ರೂಣ ಹತ್ಯೆ ತಡೆಗೆ ರಾಜ್ಯ ಸರ್ಕಾರ ಕಾನೂನು ತಿದ್ದುಪಡಿ, ರಾಜ್ಯಮಟ್ಟದ ಕಾರ್ಯಪಡೆ ರಚನೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಲಿಂಗ ಪತ್ತೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಚಿವರು, ಕಳೆದ ವರ್ಷ 1,000 ಪುರುಷರಿಗೆ 947 ಮಹಿಳೆಯರಿದ್ದರು. ಈ ವರ್ಷ 929 ಇದ್ದಾರೆ. ಮಹಿಳೆಯರ ಸಂಖ್ಯೆ ಕಡಿಮೆಯಾಗಿದೆ ಎಂದರು.

### ರಾಜ ನುಡಿ

ಮನುಷ್ಯನ ಸಾವಿರಾರು ವರ್ಷಗಳ ಇತಿಹಾಸವನ್ನು ಅವಲೋಕಿಸಿದಾಗ, ಉಳಿದದ್ದು ಕೇವಲ ವಿಚಾರಗಳೆ ಹೊರತು ಯಾವುದೆ ವೈಭವ, ವೈಭೋಗಗಳು ಅಲ್ಲವೆ ಅಲ್ಲ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 258

*ವೇದ ನಾದ ವಾಙ್ಮನಕ್ಕತೀತವಾದ ಲಿಂಗ*

*ವೇದ ವೇದಾಂತಗಳಿಗೆ ಅಸಾಧ್ಯವಾದ*
*ಅನುಪಮ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು*
*ಎನ್ನ ಕರಸ್ಥಲಕ್ಕೆ,*
*ನಾದಬಿಂದು ಕಳೆಗಳಿಗಭೇದ್ಯವಾದ*
*ಅಚಲಿತ ಲಿಂಗವನು ತಂದುಕೊಟ್ಟನಯ್ಯಾ*
*ಸದ್ಗುರು ಎನ್ನ ಕರಸ್ಥಲಕ್ಕೆ,*
*ವಾಙ್ಮನಕ್ಕಗೋಚರವಾದ*
*ಅಖಂಡಿತ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು*
*ಎನ್ನ ಕರಸ್ಥಲಕ್ಕೆ,*
*ಇನ್ನು ನಾನು ಬದುಕಿದೆನು*
*ನಾ ಬಯಸುವ ಬಯಕೆ ಕೈ ಸಾರಿತಿಂದು*
*ಕೂಡಲಸಂಗಮದೇವ .*
*– ಬಸವಣ್ಣನವರು*

ಲಿಂಗವೆಂದರೇನು ಎಂಬ ಬಗ್ಗೆ ನಮಗೆ ತಿಳಿಸಿಕೊಡುವ ಸದ್ಗುರು ಬೇಕಾಗಿದ್ದಾರೆ ಕೇವಲ ವಚನಗಳನ್ನು ಓದಿ ಲಿಂಗದ ಮಹಿಮೆಯನ್ನು ಅರಿಯಲು ಸಾಧ್ಯವಿಲ್ಲ ಬಸವಣ್ಣನವರು ಹೇಳಿದಂತೆ 'ಅನುಪಮ ಅಖಂಡಿತ ಅಚಲಿತ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ, ಇನ್ನು ನಾನು ಬದುಕಿದೆನು ನಾ ಬಯಸುವ ಬಯಕೆ ಕೈ ಸಾರಿತಿಂದು ಕೂಡಲಸಂಗಮದೇವ'.ಎನ್ನುವಲ್ಲಿ ಲಿಂಗದ ಸ್ವರೂಪವನ್ನು ತಿಳಿಸಿದ್ದಾರೆ. ಲಿಂಗವು (ಅನುಪಮ)ಉತ್ಕೃಷ್ಟವಾದದ್ದು ಯಾವೂದೇ ಹೋಲಿಕೆಗೆ ನಿಲುಕದಾದುದು ಎಕೇಂದರೆ ಎಲ್ಲವೂ ಅದೇ ಆಗಿದೆ, ಲಿಂಗವೂ ಚಲಿಸದೇ ಇರುವುದಲ್ಲ ಏಕೇಂದರೆ ಎಲ್ಲವನ್ನು ಆ ಅದೇ ಆವರಿಸಿರುವಾಗ ಅದಕ್ಕೆ ಚಲನೆಗೆ ಅವಕಾಶ ಕೊಡುವುದಾದರು ಯಾವುದು ಕಾರಣ ಲಿಂಗ ಅಚಲ. ಸರ್ವಬ್ರಹ್ಮಾಂಡವೆಲ್ಲ ಆವರಿಸಿರುವ ಲಿಂಗವನ್ನು ತುಂಡಾಗಿ ನೋಡಲು ಸಾಧ್ಯವಿಲ್ಲದ ಕಾರಣ ಲಿಂಗ ಅಖಂಡಿತವಾಗಿದೆ. ಇಂತಹ ಲಿಂಗವೇ ನಾನು ಬಯಸಿದ ಬಯಕೆಯಾಗಿತ್ತು ಅದು ಇಂದು ಎನ್ನ ಕೈಗೆಬಂದಾಗಿದೆ ಎಂಬ ಸಂತಸವನ್ನು ಬಸವಣ್ಣನವರು ಇಲ್ಲಿ ವ್ಯಕ್ತಪಡಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ದೇಶಕ್ಕೆ ವೀರ ಯೋಧರ ಕೊಡುಗೆ ಅಪಾರ :ಟಿ.ಭೂಬಾಲನ್



ಉದಯರಶ್ಮಿ ನ್ಯೂಸ್

ವಿಜಯಪುರ: ಇಂಡೋ-ಪಾಕ್ 1971ರ ಯುದ್ಧದಲ್ಲಿ ಭಾಗವಹಿಸಿದ ಕೊಡುಗೆ ಯೋಧರು ಇಂದಿನ ವಿಜಯ ದಿವಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ನಮ್ಮೆಲ್ಲರಿಗೂ ಹೆಮ್ಮೆ ಹಾಗೂ ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಹೇಳಿದರು.

ನಗರದ ಸೈನಿಕ ಶಾಲೆಯ ಸಭಾಭವನದಲ್ಲಿ ಇತ್ತಿಚಿಗೆ ಹಮ್ಮಿಕೊಂಡ ವಿಜಯ ದಿವಸ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಂದ ದೇಶಭಕ್ತಿ ಗೀತೆ, ಯುದ್ಧದಲ್ಲಿ ಪಾಲ್ಗೊಂಡ ಯೋಧರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಸೈನಿಕ ಶಾಲೆಯ ಪ್ರಾಂಶುಪಾಲ ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ, ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಅಧಿಕಾರಿಗಳು ಮಾಜಿ ಸೈನಿಕರು ಸೈನಿಕ ಶಾಲೆಯ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ವಿಜಯಪುರದಲ್ಲಿ ಶ್ವಾನಗಳ ಪ್ರದರ್ಶನಕ್ಕೆ ಶಾಸಕರಾದ ಯತ್ನಾಳ, ಕಟಕದೊಂಡರಿಂದ ಚಾಲನೆ

# ಅಪರೂಪದ ಶ್ವಾನಗಳನ್ನು ಕಣ್ತುಂಬಿಕೊಂಡ ಜನತೆ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಪೊಲೀಸ್ ಪರೇಡ್ ಗ್ರೌಂಡನಲ್ಲಿ ಭಾನುವಾರ ಏರ್ಪಡಿಸಿದ ಶ್ವಾನ ಪ್ರದರ್ಶನಕ್ಕೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಚಾಲನೆ ನೀಡಿದರು.

ಈ ಪ್ರದರ್ಶನದಲ್ಲಿ ಸುಮಾರು 24 ತಳಿಯ ಶ್ವಾನಗಳು ಪಾಲ್ಗೊಂಡು, ಸಾರ್ವಜನಿಕರ ಗಮನ ಸೆಳೆದವು.



ಪ್ರದರ್ಶನಕ್ಕೆ 250 ಶ್ವಾನಗಳ ಮಾಲೀಕರು ಪ್ರದರ್ಶನಕ್ಕೆ ನೋಂದಣಿ ಮಾಡಿಕೊಂಡು ಪಾಲ್ಗೊಂಡರು. ಗ್ರೇಟ್ ಡೇನ್, ಬೀಗಲ್, ಬಾಕ್ಸರ್, ಪೂಡಲ್, ಬೆಲ್ಜಿಯಂ ಮಾಸ್ಟಿಪ್, ಪಸ್ಮಿ ಪಂಜಾಬಿ, ಮಿನಿಯೇಚರ್ ಪಮೇರಿಯನ್, ಸ್ಪಿಡ್ಜು, ಕಾಕರ್ ಸ್ಪೇನಿಯಲ್, ಮುಧೋಳ ಹೌಂಡ, ಲ್ಯಾಬ್ರಡಾರ್, ಡಾಬರ್ ಮನ್, ಕೇನ್ ಕಾರ್ಸೋ, ಸೈಬೇರಿಯನ್ ಹಸ್ಕಿ,ಗೋಲ್ಡನ್ ರಿಟ್ರೈವರ್ ಗ್ರೇ ಹೌಂಡ್ ಹೀಗೆ ವಿವಿಧ ತಳಿಯ ಮುದ್ದು ಸ್ವಾನಗಳು ಎಲ್ಲರ ಗಮನ ಸೆಳೆದವು. ಅಪರೂಪದ ಶ್ವಾನಗಳನ್ನು ಸಾರ್ವಜನಿಕರು ಕಣ್ತುಂಬಿಕೊಂಡರು.

ವಿವಿಧ ತಳಿಯ ಶ್ವಾನಗಳು ಅಬಾಲವೃದ್ಧರಾದಿಯಾಗಿ ನೆರೆದ ಜನರಿಗೆ ಮನರಂಜನೆ ನೀಡಿದವು. ಶ್ವಾನಗಳ ಮಾಲೀಕರು ಅವುಗಳ ವಿಶೇಷ ಹೆಸರಿನಿಂದ ಕರೆಯುತ್ತಿರುವುದು ಸಾಮಾನ್ಯ ದೃಶ್ಯವಾಗಿತ್ತು. ಇಲಾಖೆಯಿಂದ ಸ್ಥಾಪಿತ ಕೌಂಟರಿನಲ್ಲಿ ಪ್ರದರ್ಶನಕ್ಕೆ ಕರೆ ತಂದ ಶ್ವಾನಗಳ ನೋಂದಣಿ ಕಾರ್ಯ ನಡೆದು, ಆರೋಗ್ಯ ತಪಾಸಣೆ ನಡೆಸಿ, ರೋಗ ನಿರೋಧಕ ಲಸಿಕೆ ನೀಡಲಾಯಿತು.



ನಾಗಠಾಣ ಶಾಸಕ ವಿಠಲ ಕಟಕಧೋಂಡ ಮಾತನಾಡಿ, ನಮ್ಮ ಪರಂಪರೆಯಲ್ಲಿ ಶ್ವಾನಕ್ಕೆ ತನ್ನದೇಯಾದ ಮಹತ್ವವಿದೆ. ರೈತರ ಒಡನಾಡಿ, ನಂಬಿಗಸ್ಥ ಪ್ರಾಣಿ ಜೀವದ ಹಂಗು ತೊರೆದು ಮಾನವನ ಜೀವನ ರಕ್ಷಣೆ ಮಾಡುತ್ತದೆ. ಈ ಪ್ರದರ್ಶನದಿಂದ ಶ್ವಾನ ಪ್ರಿಯರಿಗೆ ಪ್ರೇರಣೆ ದೊರೆಯಲಿದೆ ಎಂದರು.

ಬಸನಗೌಡ ಪಾಟೀಲ ಯತ್ನಾಳ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಆರು ವರ್ಷಗಳಿಂದ ಈ ಪ್ರದರ್ಶನ ಏರ್ಪಾಡಿಸುತ್ತಾ ಬರಲಾಗುತ್ತಿದೆ. ವಿವಿಧ ತಳಿಯ ಶ್ವಾನಗಳು ಪ್ರದರ್ಶನದಲ್ಲಿ ಪಾಲ್ಗೊಂಡಿವೆ. ಪ್ರಾಣಿ ಪ್ರೀತಿ, ಪ್ರಾಣಿ ಸಂರಕ್ಷಣೆ ನಮ್ಮ ಸಂಸ್ಕೃತಿಯ ಭಾಗ. ಪ್ರಾಣಿಗಳನ್ನು ಪ್ರೀತಿಯಿಂದ ಕಾಣಬೇಕು. ಪ್ರತಿಯೊಂದು ಪ್ರಾಣಿಗಳಿಗೆ ಗೌರವ ಕೊಡುವ ಸಂಸ್ಕೃತಿ ಭಾಗವಾಗಿದೆ. ಎಲ್ಲಾ ಪಶು ಪಕ್ಷಿಗಳಿಗೆ ನಿಸರ್ಗದಲ್ಲಿ ಅವುಗಳ ಪಾಲಿದೆ. ಮುಧೋಳ ಶ್ವಾನ ಬಹಳ ಪ್ರಸಿದ್ಧಿ ಹೊಂದಿದ್ದು, ಮುಧೋಳದ ಶ್ವಾನಗಳು ಭಾರತೀಯ ಸೇನೆಯಲ್ಲಿರುವುದು ನಮಗೆ ಗೌರವ. ಪಶು ಪಕ್ಷಿಗಳಿಗೆ ಆಹಾರ ನೀಡಿ, ಅವುಗಳ ರಕ್ಷಣೆ ಮಾಡಬೇಕು.ಇಲ್ಲಿ ಭಾಗವಹಿಸುವ ಶ್ವಾನಗಳಿಗೆ ಪಾರಿತೋಷಕ ಹಾಗೂ ಬಹುಮಾನ ನೀಡಲಾಗುತ್ತಿದೆ. ಶ್ವಾನ ಪ್ರದರ್ಶನ ಯಶಸ್ವಿಯಾಗಲಿ ಎಂದರು.

ಶ್ವಾನಗಳಿಗೆ ರೇಬಿಸ್ ರೋಗ ನಿರೋಧಕ ಲಸಿಕಾ ಅಭಿಯಾನ ಜಿಲ್ಲಾದ್ಯಂತ ಹಮ್ಮಿಕೊಳ್ಳಲಾಗಿದೆ. ಎಲ್ಲರೂ ಜಾನುವಾರುಗಳಿಗೆ ಅಗತ್ಯ ಲಸಿಕೆ ಹಾಕಿಸಬೇಕು ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಅಶೋಕ ಘೋಣಸಗಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶಂಕರ್ ಮಾರಿಹಾಳ,ಮುಖ್ಯ ಪಶುವೈದ್ಯಾಧಿಕಾರಿ ಡಾ. ಬಿ.ಎಸ್ ಕನಮಡಿ, ಹಾಸನದ ಪಶು ವೈದ್ಯಕೀಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್.ನಾಗರಾಜ್ ಹಾಗೂ ಡಾ.ಡಿ.ಆರ್.ಮಂಜುನಾಥ ಸೇರಿದಂತೆ ನಾಗರಿಕರು ಉಪಸ್ಥಿತರಿದ್ದರು.

# ಆಯುರ್ವೇದ ಈಗ ವಿಶ್ವದೆಲ್ಲೆಡೆ ಜನಪ್ರಿಯ



**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತೀಯ ಪುರಾತನ ವೈದ್ಯ ಪದ್ಧತಿ ಆಯುರ್ವೇದ ಈಗ ವಿಶ್ವದೆಲ್ಲೆಡೆ ಜನಪ್ರೀಯವಾಗಿದೆ ಎಂದು ಯರನಾಳ ಮತ್ತು ಉಕ್ಕಲಿ ವಿರಕ್ತಮಠದ ಶ್ರೀ ಗುರು ಸಂಗನಬಸವ ಮಹಾಸ್ವಾಮೀಜಿ ಹೇಳಿದ್ದಾರೆ.

ನಗರದ ಬಿ. ಎಲ್. ಡಿ. ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ ಅಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ರವಿವಾರ ನಡೆದ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸ್ನೇಹ ಸಮ್ಮೇಳನ ಸ್ನೇಹ ಮಾಗಮ-2023 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವೈದ್ಯರು ನಮ್ಮ ಭಾರತೀಯ ಪುರಾತನ ವೈದ್ಯಪದ್ಧತಿಯಾಗಿರುವ ಆಯುರ್ವೇದವನ್ನು ಜನಸಾಮಾನ್ಯರಿಗೆ ತಲುಪಿಸಬೇಕು. ಈ ಕ್ಷೇತ್ರದಲ್ಲಿರುವ ಚಿಕಿತ್ಸಾ ವಿಧಾನಗಳನ್ನು ಹೆಚ್ಚೆಚ್ಚು ಪ್ರಚಾರ ಮಾಡುವ ಮೂಲಕ ತಾವೂ ಕೂಡ ಹೆಸರು ಬೆಳೆಯಬೇಕು. ಬಿ.ಎಲ್.ಡಿ.ಇ ಸಂಸ್ಥೆಯ ಸಂಸ್ಥಾಪಕರಾದ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ, ಪೂಜ್ಯ ಬಂಥನಾಳ ಸ್ವಾಮೀಜಿ, ದಿ. ಬಿ. ಎಂ. ಪಾಟೀಲ ಅವರ ಆಶೀರ್ವಾದದಿಂದ ಬಿ.ಎಲ್.ಡಿ.ಇ ಸಂಸ್ಥೆ ಮತ್ತು ಆಯುರ್ವೇದ ಮಹಾವಿದ್ಯಾಲಯ ಇನ್ನೂ ಉನ್ನತ ಸ್ಥಾನಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಕಾಲೇಜಿನ ಹಳೆಯ ವಿದ್ಯಾರ್ಥಿ ಮತ್ತು ಮೈಸೂರಿನ ಸರಕಾರಿ ಆಯುರ್ವೇದ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಎಸ್. ರಾಧಾಕೃಷ್ಣ ರಾಮರಾವ ಮಾತನಾಡಿ, ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಈಗ ಸಾಕಷ್ಟು ಅಭಿವೃದ್ಧಿಯಾಗಿದೆ. ಇದನ್ನು ನೋಡಿದರೆ, ನಾನು 1984ರ ಬದಲು ಈಗ ವಿದ್ಯಾರ್ಥಿಯಾಗಿರಬೇಕಿತ್ತು ಎನಿಸುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆಯುರ್ವೇದ ಕ್ಷೇತ್ರದಲ್ಲಿ ಸಂಶೋಧನೆಗೆ ಬಹಳಷ್ಟು ಅವಕಾಶಗಳಿವೆ. ವೈದ್ಯರು ಮತ್ತು ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಶೈಕ್ಷಣಿಕ, ವೈದ್ಯಕೀಯ, ಸಂಶೋಧನೆ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಉತ್ತಮ ಹೆಸರು ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹಳೆಯ ವಿದ್ಯಾರ್ಥಿಗಳು ಇಂಥ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದವತಿಯಿಂದ ಬಿ. ಎ. ಎಂ. ಎಸ್ ಅಂತಿಮ ವರ್ಷದ ಪದವಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿನಿ ಡಾ. ವೈಷ್ಣವಿ ಗಣೇಶಕರ ಅವರನ್ನು ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಬಿ. ಎಲ್. ಡಿ. ಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಆರ್. ಬಿ. ಕೊಟ್ನಾಳ, ಸಂಘಧ ಉಪಾದ್ಯಕ್ಷ ಡಾ. ಬಿ. ಬಿ. ಪಾಟೀಲ ಮತ್ತು 250ಕ್ಕೂ ಹೆಚ್ಚು ವೈದ್ಯರು ಉಪಸ್ತಿತರಿದ್ದರು.

ಕಲರ್ಸ ಕನ್ನಡ ವಾಹಿನಿಯ ಬಾಲ ಗಾಯಕಿಯಾದ ಮಹನ್ಯಾ ಪಾಟೀಲ, ವಿಜಯಪುರದ ಖ್ಯಾತ ಗಾಯಕ ವೀರೇಶ ವಾಲಿ ಅದ್ಬುತ ಗಾಯನಗಳ ಮೂಲಕ ಪ್ರೇಕ್ಷರನ್ನು ರಂಜಿಸಿದರು. ರತ್ನಮಾಲಾ ಅಕಾಡೆಮಿಯಿಂದ ಭರತ ನೃತ್ಯ ಪ್ರದರ್ಶನ ನಿಡಲಾಯಿತು. ಖ್ಯಾತ ಹಾಸ್ಯ ಕಲಾವಿದ ಪ್ರಶಾಂತ ಚೌಧರಿ ಎಲ್ಲರನ್ನು ತಮ್ಮ ಹಾಸ್ಯಚಟಾಕಿಯಿಂದ ನಗೆಗೆಡಲಲ್ಲಿ ತೆಲಿಸಿದರು.

ಸಂಘಧ ಸದಸ್ಯ ಕಾರ್ಯದರ್ಶಿ ಡಾ. ಶ್ರೀಶೈಲ ಪಾಟೀಲ ಸ್ವಾಗತಿಸಿದರು. ಡಾ. ಎಂ. ಎ. ಹೀರೇಮಠ ವಂದಿಸಿದರು. ಡಾ. ರೇಣುಕಾ ತೆನಹಳ್ಳಿ ಮತ್ತು ಡಾ. ಡಿ. ಎನ್. ಧರಿ ನಿರೂಪಿಸಿದರು.

# ಹೆರಿಟೇಜ್ ರನ್ ಗೆ ಮಹಿಳೆಯರ ಅಭೂತಪೂರ್ವ ಸ್ಪಂದನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಡಿಸೆಂಬರ್ 24 ರಂದು ನಡೆಯಲಿರುವ ವೃಕ್ಷಥಾನ್ ಹೆ-ರಿಟೇಜ್ ರನ್-2023ಕ್ಕೆ ಮಹಿಳೆಯರು ಅತ್ಯುತ್ಸಾಹದಿಂದ ಪಾಲ್ಗೊಳ್ಳುತ್ತಿದ್ದು, ಸೀರೆಯುಟ್ಟು ಬರಿಗಾಲಿನಲ್ಲಿ ಓಡುವ ಓಟಗಾರ್ತಿ ಎಂದೇ ಹೆಸರಾಗಿರುವ ಪ್ರೀತಿ ಮನೀಶ್ ಅವರು 21 ಕಿ. ಮೀ. ಸ್ಪರ್ಧೆಯಲ್ಲಿ ಪಾಲ್ಗೋಳ್ಳುತ್ತಿರುವುದು ಇತರರಿಗೆ ಸ್ಫೂರ್ತಿ ನೀಡುತ್ತಿದೆ.



ಹುಬ್ಬಳ್ಳಿ ಮೂಲದ ಮತ್ತು ಬೆಂಗಳೂರಿನಲ್ಲಿ ನೆಲೆಸಿರುವ ಅವರು, ಬ್ಯೂಸಿನೆಸ್ ಮ್ಯಾನೆಜಮೆಂಟ್ ಸ್ನಾತಕೋತ್ತರ ಪದವೀಧರೆಯಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಕಳೆದ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅವರು, ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಜಾಗೃತಿ ಕು-ರಿತು ಎನ್ಜಿಓವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಾನಾ ಶಾಲೆ ಮತ್ತು ಕಾಲೇಜುಗಳು ಹಾಗೂ ಮಹಿಳಾ ಗುಂಪುಗಳಲ್ಲಿ ಪ್ರೌಢಾವಸ್ಥೆ, ಸುಸ್ಥಿರ ಮುಟ್ಟಿನ ಕುರಿತು ಹಾಗೂ ಋತುಚಕ್ರದ ಬಗ್ಗೆ ಯುವತಿಯರು ಹಾಗೂ ಮಹಿಳೆಯಲ್ಲಿ ಅರಿವು ಮೂಡಿಸುವ ಸಮಾಜಮುಖಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

ಭಾರತೀಯರು ಸೀರೆ ಉಡು-ವುದನ್ನು ಪ್ರೋತ್ಸಾಹಿಸಲು ಮತ್ತು ಬರಿಗಾಲಿನಲ್ಲಿಯೂ ಸಾಧನೆ ಮಾಡಬಹುದು ಎಂಬುದನ್ನು ತೋ-ರಿಸಲು ಅವರು ಅಪ್ಪಟ ಭಾರತೀಯ ಮಹಿಳೆಯಾಗಿ ಸೀರೆಯುಟ್ಟು ಬರಿಗಾಲಿನಲ್ಲಿ ಓಡುವುದನ್ನು ರೂಢಿಯಾಗಿಸಿಕೊಂಡಿದ್ದಾರೆ. ಅಲ್ಲದೇ, ಈಗಾಗಲೇ ಹಲವಾರು ಮ್ಯಾರಾಥಾನ್ ಗಳಲ್ಲಿ ಪಾಲ್ಗೊಂಡು ಬರಿಗಾಲ ಓಟಗಾರ್ತಿ ಎಂದೇ ಹೆಸರು ಮಾಡಿದ್ದಾರೆ.

ದೂರದ ಓಟಗಳಲ್ಲಿ ಏಕಾಂಗಿಯಾಗಿ ಓಡುವುದನ್ನು ಹೆಚ್ಚಾಗಿ ಇಷ್ಟಪಡುವ ಅವರು, ಓಟ ಮತ್ತು ವ್ಯಾಯಾಮದ ಮೂಲಕ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವ ಸಂಕಲ್ಪ ಮಾಡಿದ್ದಾರೆ. ಶಿಸ್ತುಬದ್ಧ ಜೀವನಕ್ಕೆ ಇತತರಿಗೆ ಮಾದರಿಯಾಗಿರುವ ಅವರು, ಪ್ರತಿದಿನ ನಸುಕಿನ ಜಾವ 3.30 ಗಂಟೆಗೆ ಏಳುತ್ತಾರೆ. ವಾರದಲ್ಲಿ ಐದು ದಿನಗಳನ್ನು ಓಟ ಮತ್ತು ವ್ಯಾಯಾಮಗಳಿಗಾಗಿ ಮೀಸಲಿಟ್ಟಿದ್ದಾರೆ. 10 ವರ್ಷದ ಮಗುವಿನ ತಾಯಿಯಾಗಿರುವ ಪ್ರೀತಿ ಮನೀಶ ಅವರು ತಾಯಿ, ಹೆಂಡತಿ, ಸೊಸೆ ಮತ್ತು ಮಗಳ ರೂಪದಲ್ಲಿ ಎಲ್ಲ ಸಂಬಂಧಗಳನ್ನು ವೃತ್ತಿಪರವಾಗಿ ನಿಭಾಯಿಸುವ ದಿಟ್ಟ ಮಹಿಳೆಯಾಗಿದ್ದಾರೆ.

ಈಜು ಇಷ್ಟಪಡುವ ಅವರು, ಆಗಾಗ ಬೈಕ್ ನ್ನು ಓಡಿಸುವ ಹವ್ಯಾಸ ಹೊಂದಿದ್ದಾರೆ. ಮಾನ್ಯತೆ ಪಡೆದ ಯೋಗ ತರಬೇತಿತುದಾರರಾಗಿಯೂ ಅವರು ಕೆಲಸ ಮಾಡುತ್ತಿದ್ದು, ಕಳೆದ ಮೂರು ವರ್ಷಗಳಿಂದ ವಿಪಾಸನಾ ಧ್ಯಾನವನ್ನು ಮಾಡುತ್ತಿದ್ದಾರೆ. ಈ ವಿಪಾಸನಾ ಧ್ಯಾನ ಮತ್ತು ಸಂಗೀತ ಮನುಷ್ಯ ಯಾವುದೇ ಅಡೆತಡೆ ಇಲ್ಲದೇ ಜೀವನ ಸಾಗಿಸಲು ಇರುವ ಮೂರು ಅದ್ಭುತ ಅಂಶಗಳಾಗಿವೆ ಎಂಬುದು ಅವರ ಬಲವಾದ ನಂಬಿಕೆಯಾಗಿದೆ.

ಕಾರ್ಪೋರೇಟ್ ಶೈಲಿಯಿಂದ ಹೊರ ಬಂದಿರುವ ಅವರು, ಸ್ವಸ್ಥ ಆರೋಗ್ಯ ಹೊಂದಲು ಅಲಂಕಾ-ರಿಕ ತಾಲೀಮು, ವಿದೇಶಿ ಶೈಲಿಯ ಬಟ್ಟೆಗಳನ್ನು ಹಾಕಿಕೊಳ್ಳುವ ಅಗತ್ಯವಿಲ್ಲ. ತಾಯಿಯಾಗಿದ್ದರೂ ಅಪ್ಪಟ ಭಾರತೀಯ ಶೈಲಿಯಲ್ಲಿ ಸೀರೆಯುಟ್ಟು, ಬರಿಗಾಲಿನಲ್ಲಿ ಓಡಬಹುದು. ಈ ಮೂಲಕ ಕುಟುಂಬ ನಿರ್ವಹಣೆಗೆ ದೈಹಿಕ ಮತ್ತು ಮಾನಸಿಕವಾಗಿ ಸದೃಢವಾಗಿರಬಹುದು ಎಂಬುದನ್ನು ತಮ್ಮ ದಿನನಿತ್ಯದ ಚಟುವಟಿಕೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಪ್ರೀತಿ ಮನೀಶ ಅವರು ವಿಜಯಪುರ ಹೆರಿಟೇಜ್ ರನ್- 2023ರಲ್ಲಿ ಪಾಲ್ಗೋಳ್ಳಲು ಈಗಾಗಲೇ ಹೆಸರು ನೋಂದಾಯಿಸುವ ಮೂಲಕ ಇತರ-ರಿಗೆ ಮಾದರಿಯಾಗಿದ್ದಾರೆ.

## ಡಿ.24ರಂದು ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್-2024

# ಶಾಸಕ ಯತ್ನಾಳರಿಂದ ರೂ.10ಲಕ್ಷ ಪ್ರಾಯೋಜಕತ್ವ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕೋಟಿವೃಕ್ಷ ಅಭಿಯಾನ ಅಂಗವಾಗಿ ಡಿಸೆಂಬರ್ 24 ರವಿವಾರ ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್-2024 ಪ್ರೋತ್ಸಾಹಿಸಲು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳರವರು 10ಲಕ್ಷ ರೂ. ಪ್ರಾಯೋಜಕತ್ವ ನೀಡಿದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ ಸಸಿಗಳನ್ನು ನೆಟ್ಟು, ಮರಗಳನ್ನಾಗಿ ಬೆಳೆಸಿ, ಅರಣ್ಯ ಪ್ರಮಾಣ ಹೆಚ್ಚಿಸುವುದು. ವಿಜಯಪುರ ನಗರದಲ್ಲಿನ ವಿವಿಧ ಐತಿಹಾಸಿಕ ಸ್ಮಾರಕಗಳ ಕುರಿತು ಜಾಗೃತಿ



ಮೂಡಿಸಿ, ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಿ, ತನ್ಮೂಲಕ ನಗರದಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಿಸುವಂತೆ ಜಾಗೃತಿ ಮೂಡಿಸುವ ಹೆರಿಟೇಜ್ ರನ್ ಪ್ರೋತ್ಸಾಹಿಸಲು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಅಧ್ಯಕ್ಷತೆಯ ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ.ದಿಂದ 10ಲಕ್ಷ ರೂ.ಗಳ ಚೆಕ್ ಸಿದ್ಧಸಿರಿ ಉಪಾಧ್ಯಕ್ಷ ಬಸಯ್ಯ ಹಿರೇಮಠ, ನಿರ್ದೇಶಕ ರಾಮನಗೌಡ ಪಾಟೀಲ ಯತ್ನಾಳ ಇಂದು ಕೋಟಿವೃಕ್ಷ ಅಭಿಯಾನ ಸಂಚಾಲಕ ಪ್ರೊ.ಮುರುಗೇಶ ಪಟ್ಟಣಶೆಟ್ಟಿ ಅವರಿಗೆ ನೀಡಿದರು.

ಈ ಸಂದರ್ಭದಲ್ಲಿ ಕೋಟಿವೃಕ್ಷ ಅಭಿಯಾನದ ಡಾ.ಮಹಾಂತೇಶ ಬಿರಾದಾರ, ಶಿವನಗೌಡ ಪಾಟೀಲ, ಸಂತೋಷ ಔರಸಂಗ, ಅಮೀತ ಬಿರಾದಾರ, ಸೋಮು ಮಠ, ಸಿದ್ಧಸಿರಿ ನಿರ್ದೇಶಕರಾದ ಶಿವಾನಂದ ಅಣೆಪ್ಪನವರ, ಸಾಯಿಬಾಬಾ ಸಿಂದಗೇರಿ, ಜಗದೀಶ ಕ್ಷತ್ರಿ, ಪ್ರಭುಗೌಡ ದೇಸಾಯಿ, ರಮೇಶ ಬಿರಾದಾರ ಮತ್ತಿತರರು ಉಪಸ್ಥಿತರಿದ್ದರು.

# ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಂಪನ್ನ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ರಂಭಾಪುರಿ ಪೀಠದ ರೇಣುಕ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಅದ್ದೂ-ರಿಯಾಗಿ ಜರುಗಿತು.



ಪಟ್ಟಣದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಂಭಾಪು-ರಿಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸೋಮವಾರ ಸಾಯಂಕಾಲ ಪಂಚಾಚಾರ್ಯ ಕಲ್ಯಾಣ ಮಂಟಪದಿಂದ ಆರಂಭಗೊಂಡಿತು. ಮಹೋತ್ಸವದಲ್ಲಿ ಚಿಕ್ಕಮಗಳೂರ ಜಿಲ್ಲೆಯ ಅರಳಳ್ಳಿಯ ಶಿವತಾಂಡವ ನೃತ್ಯ ರೂಪಕ, ಸಾಗರದ ಮಹಿಳಾ ಡೊಳ್ಳು ಕುಣಿತ ವಿಶೇಷವಾಗಿದ್ದು, 251 ಕುಂಭ, ಕಳಶ ಹೊತ್ತ ಮಹಿಳೆಯರು ಮಹೋತ್ಸವದಲ್ಲಿ ಭಕ್ತಿಪೂರ್ವಕವಾಗಿ ಪಾಲ್ಗೊಂಡು ತಮ್ಮ ಭಾವ ಮೆರೆದರು.

ಮೆರವಣಿಗೆ ಇಂಡಿ ರಸ್ತೆಯಿಂದ ಆರಂಭಗೊಂಡು ಅಂಬೇಡ್ಕರ್ ವೃತ್ತ, ಮೋಹರೆ ಹಣಮಂತ್ರಾಯ ವೃತ್ತ, ಮೇನ್ ಬಜಾರ ಮಾರ್ಗವಾಗಿ ಶ್ರೀವೀರಭದ್ರೇಶ್ವರ ದೇವಸ್ಥಾನ ತಲುಪಿತು. ಮೆರವಣಿಗೆಯಲ್ಲಿ ಸಮಸ್ತ ಭಕ್ತವೃಂದ "ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ, ವಂದೇ ರೇಣುಕಂ" ಎಂಬ ಉದ್ಘೋಶಗಳೊಂದಿಗೆ ಕಳೆ ತಂದರು.

ಎಮ್ಮಿಗನೂರಿನ ವಾಮದೇವಶ್ರೀ ,ಸಗರದ ವೀರಮಹಾಂತಶ್ರೀಗಳು, ಸ'ದ'ಂು'್ಯನ'ವ'ುಠ'ದ' ವೀರಗಂಗಾಧರಶ್ರೀಗಳು, ಜಡಿಮಠದ ಜಡೇಸಿದ್ದೇಶ್ವರ ಶ್ರೀಗಳು, ಕೊಕಟನೂ-ರಿನ ಶ್ರೀಗಳು ಸಹಿತ ವಿವಿಧ ಮಠಾಧೀಶರು, ಜಾತ್ರಾ ಸಮೀತಿಯ ಸಿ.ಕೆ.ಕುದರಿ, ಬಾಬುಗೌಡ ಪಾಟೀಲ(-ಜಿಡ್ಡಿಮನಿ), ಬಾಳಯ್ಯ ಇಂಡಿಮಠ, ಯಲಗೂರೇಶ ದೇವೂರ, ಕಾಸು ಜಲಕತ್ತಿ, ಶಾಂತಯ್ಯ ಜಡಿಮಠ, ಬಂಡೆಪ್ಪಗೌಡ ದಿಂಡವಾರ, ಸಿದ್ದು ಆನಂದಿ, ಸೋಮಶೇಖರ ಹಿರೇಮಠ, ಆನಂದ ಜಡಿಮಠ, ವೀರಣ್ಣ ಮಣೂರ, ಪಿ.ಎಸ್.ಮಿಂಚನಾಳ, ಬಿ.ಕೆ.ಪಾಟೀಲ, ಶ್ರೀಕಾಂತ ನಾಶಿಮಠ, ಶಿವಾನಂದ ವಸ್ತ್ರದ ಸೇರಿದಂತೆ ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

# ವಿದ್ಯುತ್ ಕಳ್ಳತನ ಮಹಾಪರಾಧ :ಕುಂಬಾರ



**ಉದಯರಶ್ಮಿ ನ್ಯೂಸ್**

ಇಂಡಿ: ರಾತ್ರಿ ಸಮಯದಲ್ಲಿ ವಿದ್ಯುತ್ ಕಂಬಗಳ ಮೂಲಕ ನೇರವಾಗಿ ಕದ್ದು ವಾಯರ ಹುಕ್ಕು ಹಾಕಿ ವಿದ್ಯುತ್ ಕಳ್ಳತನ ಮಾಡುತ್ತಿರುವುದು ಮಹಾಪರಾಧವಾಗಿದೆ ಎಂದು ಹೆಸ್ಕಾಂ ಇಂಡಿ ಗ್ರಾಮೀಣ ಶಾಖೆಯ ಶಾಖಾಧಿಕಾರಿ ಆರ್.ವ್ಹಿ ಕುಂಬಾರ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಅವರು ತಾಲೂಕಿನ ಭುಯ್ಯಾರ ಹಾಗು ಹಿರೇಬೆವನೂರ, ನೆಹರು ನಗರದಲ್ಲಿ ವಿದ್ಯುತ್ ಬಾಕಿ ವಸೂಲಿ ಹಾಗೂ ಅನಧಿಕೃತ ವಿದ್ಯುತ್ ಕಾರ್ಯಚರಣೆಯಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳ್ಳತನದಿಂದಾಗಿ ವಿದ್ಯುತ್ ಪೋಲಾಗಿ ನಮ್ಮ ಇಲಾಖೆಗೆ ಹೆಚ್ಚಿನ ಹೊರೆ ಬೀಳುತ್ತಿರುವುದರಿಂದ ವಿದ್ಯುತ್ ಕಳ್ಳತನ ಮಾಡಬಾರದು. ಒಂದು ವೇಳೆ ವಾಮ ಮಾರ್ಗದಿಂದ ವಿದ್ಯುತ್ ಬಳಕೆ ಮಾಡಿದರೆ ಸೂಕ್ತ ಕಾನೂನು ಕ್ರಮ ಕೈಗೊಂಡು ಭಾರಿ ದಂಡ ವಿಧಿಸಲಾಗುವುದು. ಆದ್ದರಿಂದ ದಯವಿಟ್ಟು ಯಾರು ಕಳ್ಳತನ ಮಾಡಲು ಮುಂದಾಗಬಾರದು ಎಂದರು.

ಈ ವೇಳೆ ಅನಧಿಕೃತವಾಗಿ ಬಳಕೆ ಮಾಡುತ್ತಿದ್ದ ವಾಟರ್ ಹೀಟರ್ ಹಾಗೂ ವಾಯರ್ ವಶಪಡಿಕೊಂಡರು. ಇದರ ಜೊತೆಯಲ್ಲಿ ಗ್ರಾಮೀಣ ಭಾಗದ ಜನ-ರಿಗೆ ವಿದ್ಯುತ ಬಳಕೆ ಕುರಿತು ಅರಿವು ಮೂಡಿಸಿದರು.

ಕಾರ್ಯಚರಣೆಯಲ್ಲಿ ಮಲ್ಲಿಕಾರ್ಜುನ ಮಾಶಾಳ, ಕಲ್ಲಪ್ಪ ಬಜಂತ್ರಿ, ಮಲ್ಲು ಬೆಳ್ಳಿಹಾಳ, ವಿಜಯ ಧನಗೊಂಡ, ವಿವೇಕ ಖೇಡಗಿ, ಸಲೀಂ ಕೊರಬು, ರಾಜಕುಮಾರ ವಾಲಿಕಾರ ಸೇರಿದಂತೆ ಅನೇಕ ಸಿಬ್ಬಂದಿ ವರ್ಗದವರು ಇದ್ದರು.

# ನಮ್ಮ ಸುತ್ತಲೇ ಸ್ವರ್ಗವಿದೆ :ಶಿವಕುಮಾರ ಶ್ರೀ

**ಉದಯರಶ್ಮಿ ನ್ಯೂಸ್**



ಇಂಡಿ: ಜಗತ್ತು ನಮ್ಮ ನೆಮ್ಮದಿಯ ನೆಲೆ. ಇಲ್ಲಿ ಸೊಗಸಾದ ಬದುಕನ್ನು ಕಟ್ಟಿಕೊಳ್ಳಬೇಕು. ಶಾಂತಿ ಸಮಾಧಾನ ಅನುಭವಿಸಬೇಕು. ನೆಲ, ಜಲ, ಗಾಳಿ, ಬೆಳಕು ನಮಗೆ ಅವಶ್ಯ. ಹೀಗಾಗಿ ನಾವು ಭವ್ಯವೂ ದಿವ್ಯವೂ ಆದ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಬೀದ-ರಿನ ಚಿದಂಗರ ಆಶ್ರಮದ ಡಾ. ಶಿವಕುಮಾರ ಸ್ವಾಮೀಜಿ ಹೇಳಿದರು.

ತಾಲೂಕಿನ ಹಿರೇಬೇವನೂರ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ದೇವರಭಟ್ಟಿ ಜಾತ್ರಾ ಮಹೋತ್ಸವ ಹಾಗೂ ಶ್ರೀ ಭ್ರಮರಾಂಭಿಕಾ ದೇವಸ್ಥಾನದ ಜಿರ್ಣೋದ್ಧಾರಗೋಸ್ಕರ ನಡೆದ ಕಾರ್ಯಕ್ರಮದಲ್ಲಿ ಆರ್ಶೀವಚನ ನೀಡಿ ಅವರು ಮಾತನಾಡಿದರು.

ದಾಸ್ಯವು ದಾಶ್ಯದ ಮೂಲಕ ವ್ಯಕ್ತಪಡಿಸುವ ದೇವರ ಮೇಲಿನ ಪ್ರೀತಿ ಮತ್ತು ಭಕ್ತಿ. ದೇವರನ್ನು ಅಥವಾ ಗುರುಗಳನ್ನು ಸಮರ್ಪಣಾ ಭಾವದಿಂದ ಸೇವೆ ಮಾಡುವದು ದೇವಸ್ಥಾನವನ್ನು ಶುಚಿಗೊಳಿಸುವದು, ಬಡವರ ಸೇವೆ ಮಾಡುವದು,ಧರ್ಮಗ್ರಂಥ-ಗಳನ್ನು ಧ್ಯಾನಿಸುವುದು ಅಥ-ವಾ ದೇವರ ಸೇವಕರಾಗಿ ಕೆಲಸ ಮಾಡುವ ಭಕ್ತಿಯ ಪ್ರವೃತ್ತಿ ಬೆಳೆಸಿಕೊಳ್ಳಬೇಕೆಂದರು.

ಇದೇ ವೇಳೆ ಶಿವಕುಮಾರ ಶ್ರೀಗಳನ್ನು ತುಲಾಭಾರ ಮಾಡಿ ಸನ್ಮಾನಿಸಲಾಯಿತು. ಪ್ರವಚನಕಾರರಾದ ಕಲಬುರಗಿಯ ಸಿದ್ದಾರೂಢಮಠದ ಮಾತೋಶ್ರೀ ವಿದ್ಯಾತಾಯಿಯವರನ್ನು ಸನ್ಮಾನಿಸಲಾಯಿತು.

ಆಳೂರ ಗ್ರಾಮದ ಸಿದ್ದಾರೂಢ ಮಠದ ಶಂಕರಾನಂದ ಶ್ರೀಗಳು ಮತ್ತು ಮಾತೋಶ್ರೀ ಲಕ್ಷ್ಮೀತಾಯಿಯವರು, ಪ್ರವಚನಕಾರರಾದ ವಿದ್ಯಾತಾಯಿ,ವಿ-ಜಯಕುಮಾರ ಬಿರಾದಾರ, ಕಜಾಪ ಅಧ್ಯಕ್ಷ ಆರ್.ವಿ.ಪಾಟೀಲ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿ.ಎಸ್.ಪಾಟೀಲ, ಡಾ॥ ರಮೇಶ ಬಿರಾದಾರ, ದೇವಸ್ಥಾನದ ಅಧ್ಯಕ್ಷ ನಾಗಪ್ಪಗೌಡ ಬಿರಾದಾರ, ಕಾರ್ಯದರ್ಶಿ ಸಂಗಪ್ಪ ಉಪ್ಪಿನ, ಇಂಡಿ ತಾಲೂಕಾ ಕಜಾಪ ಅಧ್ಯಕ್ಷ ಆರ್.ವಿ.ಪಾಟೀಲ,ಅಣ್ಣಾರಾಯ ಬಮನಳ್ಳಿ,ಗ್ರಾ.ಪಂ ಸದಸ್ಯ ರವಿ ನಾರಾಯಣಕರ,ನಾಟಕಕಾರರಾದ ಶಿವಾನಂದ ಡೆಂಗಿ, ಕೆ.ಜಿ.ನಾಟಿಕಾರ, ಸಿದರಾಯ ಅಪ್ಪಾಗಿರಿ ಮತ್ತಿತರಿದ್ದರು.

# ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಇಂದು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ 10ಗಂಟೆಗೆ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಹಾಗೂ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ ಹಾಗೂ ಇತರ ಎಲ್ಲ ಸರಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಲಕ್ಷ್ಮೀ ನಿಂಗಪ್ಪ ಗರಗ ಉದ್ಘಾಟಿಸುವರು. ಸಿವಿಲ್ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿ ಸಂಪತ್ತ ಕುಮಾರ ಬಳೂಲಗಿಡದ ಉಪಸ್ಥಿತಿಯಲ್ಲಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಸರ್ಕಾರಿ ಅಭಿಯೋಜಕ ಬಸವರಾಜ ಆಹೇರಿ, ಅಪರ ಸರ್ಕಾರಿ ವಕೀಲ ಎಚ್.ಎಲ್.ಸರೂರ, ತಹಶೀಲ್ದಾರ ಬಲರಾಮ ಕಟ್ಟಿಮನಿ, ಪ್ರಭಾರ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಯುವರಾಜ ಹನಗಂಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಸಾವಳಗಿ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಮೂರ್ತಿ ಕುಂಬಾರ ಆಗಮಿಸಿದ್ದಾರೆ. ಮಾನವ ಹಕ್ಕುಗಳು ಹಾಗೂ ಗ್ರಾಹಕರ ಹಿತರಕ್ಷಣಾ ಕಾಯ್ದೆಯ ಕುರಿತು ನ್ಯಾಯವಾದಿ ಎನ್.ಆರ್.ಮೊಕಾಶಿ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಮೊಬೈಲ್ ಬಳಕೆ ಹೆಚ್ಚಾದಂತೆ ಬಯಲಾಟಗಳು ಮಾಯ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿದ್ದಂತೆ ಸಂಸ್ಕೃತಿಕ ಕಾರ್ಯಕ್ರಮಗಳು ಸಂಸಾರಿಕ ಆಟಗಳು, ನಾಟಕಗಳು ಬಯಲಾಟಗಳು, ಸಂಪೂರ್ಣ ಮಾಯವಾಗುತ್ತಿವೆ ಎಂದು ಮಾಜಿ ಶಾಸಕ ಶರಣಪ್ಪ ಸುಣಗಾರ ಹೇಳಿದರು.

ತಾಲೂಕಿನ ಯಲಗೋಡ ಗ್ರಾಮದ ಶ್ರೀ ಹಜರತ್ ಲಾಡ್ಲೆ ಮಶ್ಯಾಕ ಉರಿಸ್ ಪ್ರಯುಕ್ತ ಶ್ರೀ ಭಾಗ್ಯವಂತಿ ಸಾಂಸ್ಕೃತಿಕ ನಾಟ್ಯ ಕಲಾವಿದರ ಸಂಘ ( ರಿ ) ಮೋರಟಗಿ ಇವರ ಮಗ ಹೋದರು ಮಾಂಗಲ್ಯ ಬೇಕು ನಾಟಕ ಉದ್ಘಾಟಿಸಿ ಅವರು ಮಾತನಾಡಿದರು.

ಪಟ್ಟಣಗಳಲ್ಲಿ ಯುವಕರು ಅನವಶ್ಯಕ ಮೊಬೈಲ್ ಬಳಸಿ ಅದರಲ್ಲಿ ಬರುವಂತಹ ದೃಶ್ಯಗಳನ್ನು ಅಳವಡಿಸಿಕೊಂಡು ಜೀವನವೇ ಕಳೆದುಕೊಳ್ಳುವ ಸ್ಥಿತಿಗೆ ತಲುಪಿದ್ದಾರೆ. ಇಂತಹ ದಿನಮಾನದಲ್ಲಿ ಗ್ರಾಮೀಣ ಭಾಗದ ಜನರು ಜಾತ್ರಾ ಪ್ರಯುಕ್ತವಾಗಿ ಸುಂದರ ನಾಟಕ ಹಮ್ಮಿಕೊಂಡಿದ್ದು ನಿಜಕ್ಕೂ ಶ್ಲಾಘನೀಯ. ಸಂಸಾ-ರಿಕ ನಾಟಕಗಳಲ್ಲಿ ಬರುವಂತಹ ಸನ್ನಿವೇಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ನಾಗ-ರಿಕರಾಗಿ ಬಾಳಬೇಕು. ತಮ್ಮ ತಂದೆ ತಾಯಿಗಳು ತಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆಯದೆ ದುಶ್ಚಟಗಳಿಂದ ದೂರವಿದ್ದು ಸುಂದರ ಜೀವನ ಸಾಗಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವೇದಮೂರ್ತಿ ನಿಂಗಯ್ಯ ಸ್ವಾಮಿ ಸಾನಿಧ್ಯ ವಹಿಸಿದ್ದರು. ಮಗದುಮಸಾಬ್ ದಾದಾ, ಮೈಬುಬಸಾಬ ಮುಂಜಾವರ್, ಶ್ರೀ ಭಾಗ್ಯವಂತಿ ಸಾಂಸ್ಕೃತಿಕ ನಾಟ್ಯ ಕಲಾವಿದರ ಸಂಘದ ಮಾಲಿಕ ಭೀಮರಾಯ ಕಟ್ಟಿಮನಿ, ಸೇರಿದಂತೆ ಕಲಾವಿದರ ತಂಡ, ಗ್ರಾಮಸ್ಥರು ಇದ್ದರು.


# ಡಿ.20ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕೆಪಿಟಿಸಿಎಲ್ ವತಿಯಿಂದ 110/11 ಕೆವಿ ದೇವರ ಗೆಣ್ಣೂರ, ಬಬಲೇಶ್ವರ, ಶಿರಬೂರು ಹಾಗೂ 33/11 ಕೆವಿ ದೇವರ ಗೆಣ್ಣೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 11 ಕೆವಿ ಬೇಗಳ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ವಿದ್ಯುತ್ ವಿತರಣಾ ಕೇಂದ್ರಗಳಿಂದ ಹೊರಡುವ ಎಲ್ಲ 11 ಕೆವಿ ವಿದ್ಯುತ್ ಮಾರ್ಗಗಳಲ್ಲಿ ಡಿ.20ರ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಪೂರೈಕೆಂಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹರಿಸುವಂತೆ ವಿಜಯಪುರ ಹೆಸ್ಕಾಂನ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮಠಕ್ಕೆ ಭಕ್ತರೇ ಆಸ್ತಿ :ಮುರುಘೇಂದ್ರ ಶ್ರೀಗಳು

**ಉದಯರಶ್ಮಿ ನ್ಯೂಸ್**



ಇಂಡಿ: ಸಮಾಜದಲ್ಲಿ ಆಡಂಬರದ ಮದುವೆಗಳು ಕಡಿಮೆಯಾದರೆ ಜನರ ಆರ್ಥಿಕ ಪರಿಸ್ಥಿತಿ ಸುಧಾ-ರಿಸಲಿದೆ. ಸಾಮೂಹಿಕ ವಿವಾಹದಲ್ಲಿ ಮದುವೆಯಾದ ದಂಪತಿ ಅನ್ಯೋನ್ಯವಾಗಿ ಬಾಳುವ ಮೂಲಕ ಈ ಕಾರ್ಯಕ್ರಮದ ಉದ್ದೇಶವನ್ನು ಸಾರ್ಥಕಪಡಿಸಬೇಕು ಎಂದು ಶಿರಶ್ಯಾಡದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಹೇಳಿದರು.

ಅವರು ತಾಲೂಕಿನ ಶಿರಶ್ಯಾಡ ಗ್ರಾಮದಲ್ಲಿ ಲಿಂ. ಮುರುಘೇಂದ್ರ ಶಿವಾಚಾರ್ಯರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದ ನೇತೃತ್ವವಹಿಸಿ ಆಶೀರ್ವಚನ ನೀಡಿದರು.

ಶ್ರೀ ಮಠಕ್ಕೆ ಭಕ್ತರೇ ಆಸ್ತಿ. ನಾವು 2009ರಿಂದ ಪ್ರತೀ ವರ್ಷ ಸಾಮೂಹಿಕ ವಿವಾಹ ಸೇರಿದಂತೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಶ್ರೀ ಮಠದ ಭಕ್ತರೇ ಎಲ್ಲ ಕಾರ್ಯಕ್ರಮಗಳಿಗೆ ಹಣ ಸಂಗ್ರಹಿಸಿ, ಕೆಲವರಿಗೆ ಜವಾಬ್ದಾರಿ ನೀಡಿ ಎಲ್ಲ ಕಾರ್ಯಕ್ರಮ ಯಶಸ್ವಿಗೊಳಿಸುತ್ತಾರೆ ಎಂದರು.

ಗಡಿ ಗೌಡಗಾಂವ ಮಠದ ಶಾಂತವೀರ ಶಿವಾಚಾರ್ಯರು ಮಾತನಾಡಿ, ಮಠಗಳು ಭಕ್ತರ ಉದ್ಧಾರಕ್ಕಾಗಿ ದುಡಿಯುವ ಕೇಂದ್ರಗಳಿದ್ದಂತೆ ಮಠಗಳಿಗೆ ಭಕ್ತ-ರಿಂದ ಬಂದ ಭಕ್ತಿಯ ಕಾಣಿಕೆಯನ್ನು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮತ್ತೆ ಭಕ್ತರಿಗೆ ಮುಟ್ಟಿಸಬೇಕು. ಅದು ಸ್ವಾಮೀಜಿಗಳ ಕೆಲಸ. ಆ ಕೆಲಸವನ್ನು ಚಾಚೂ ತಪ್ಪದೆ ಶಿರಶ್ಯಾಡದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಮಾಡುತ್ತಿದ್ದಾರೆ.

ವಿವಾಹಗಳು ದುಬಾ-ರಿಯಾಗುತ್ತಿರುವ ಇಂದಿನ ದಿನಗಳಲ್ಲಿ ಸರಳ ಸಾಮೂಹಿಕ ವಿವಾಹಗಳ ಅಗತ್ಯತೆ ಹೆಚ್ಚಿದೆ. ಶಿರಶ್ಯಾಡದ ಶ್ರೀಗಳು ತಮ್ಮ ಭಕ್ತರಿಗೆ ಆರ್ಥಿಕ ಹೊರೆಯಾಗಬಾರದೆಂಬ ಕಾರಣಕ್ಕೆ ಸಾಮೂಹಿಕ ವಿವಾಹ ಹಮ್ಮಿಕೊಳ್ಳುತ್ತಿದ್ದಾರೆ ಎಂದರು.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂತಾ ನಾಯಿಕ್ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲ ಮಠಗಳು ಧರ್ಮವನ್ನು ಉಳಿಸುವ ಕಾರ್ಯ ಮಾಡುತ್ತಿವೆ. ಶಿರಶ್ಯಾಡ ಶ್ರೀಗಳು ಪ್ರತೀ ವರ್ಷ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಕ್ತರ ಏಳ್ಗೆಗೆ ಶ್ರಮಿಸುತ್ತಿದ್ದಾರೆ ಎಂದ ಅವರು. ಮಹಿಳೆಯರು ಸಹ ಮುಖ್ಯ ವಾಹಿನಿಗೆ ಬರಬೇಕು. ದೇಶದಲ್ಲಿ ಮಹಿಳೆಯರಿಗೆ ಮಾತೃ ಸ್ಥಾನವಿದೆ. ಎಲ್ಲ ರಂಗದಲ್ಲೂ ಮಹಿಳೆ ಈಗ ಮುಂಚೂಣಿಯಲ್ಲಿದ್ದಾಳೆ. ಗ್ರಾಮೀಣ ಭಾಗದ ಜನರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಹಿಂದೇಟು ಹಾಕಬಾರದು. ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದರು.

ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಜಶೇಖರ ಗುಡದಿನ್ನಿ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀಮಂತ ಇಂಡಿ, ಪತ್ರಕರ್ತ ಉಮೇಶ ಬಳಬಟ್ಟಿ, ಸಮಾಜ ಕಲ್ಯಾಣ ಅಧಿಕಾರಿ ಭೀಮಾಶಂಕರ ಬಿರಾದಾರ ಮಾತನಾಡಿ, ಸಾಮೂಹಿಕ ವಿವಾಹಗಳು ಬಡವರ ವಿವಾಹಗಳಲ್ಲ. ಸಾಮೂಹಿಕ ವಿವಾಹ ಭಾಗ್ಯವಂತರ ವಿವಾಹಗಳಾಗಿವೆ. ಸಾಮೂಹಿಕ ವಿವಾಹಗಳಲ್ಲಿ ಹತ್ತಾರು ಶರಣರ ಆಶೀರ್ವಾದ, ಹಿರಿಯರ ಆಶೀರ್ವಾದ ಸಿಗುವುದಲ್ಲದೆ. ದಂಪತಿಗಳು ಮಠದಲ್ಲಿ ಮದುವೆಯಾಗಿದ್ದೇವೆ. ಸರಿಪಡಿಸಿಕೊಂಡು ಹೋಗಬೇಕು ಎನ್ನುವ ಭಾವದಿಂದ ದಾಂಪತ್ಯ ನಡೆಸುವುದರಿಂದ ಕೊನೆಯವರೆಗೂ ಒಂದಾಗಿ ಸುಖ-ಸಂತೋಷದಿಂದ ಬಾಳುತ್ತಾರೆ ಎಂದರು.

ಕಾರ್ಯಕ್ರಮದ ಸಾನಿಧ್ಯವಹಿಸಿ ಕಡಕೋಳದ ರುದ್ರಮುನಿ ಶಿವಾಚಾರ್ಯರು, ರೋಡಗಿಯ ಅಭಿನವ ಶಿವಲಿಂಗೇಶ್ವರ ಮಹಾಸ್ವಾಮಿಜಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಕಲ್ಲನಗೌಡ ಪಾಟೀಲ, ಕಾಶೀರಾಯಗೌಡ ಪಾಟೀಲ, ಮಡು ದೇಸಾಯಿ, ಮಲ್ಲನಗೌಡ ಪಾಟೀಲ, ಶಂಕರ ಚೌಹಾಣ, ನಾಗನಗೌಡ ಚೌಧರಿ, ಬಾಬುರಾಯಗೌಡ ಪಾಟೀಲ ಸೇ-ರಿದಂತೆ ಮತ್ತಿತರರು ಇದ್ದರು.

# ಜೆಎಸ್ಸೆಸ್ ಆಸ್ಪತ್ರೆ ಹೆಸರು ದುರುಪಯೋಗಕ್ಕೆ ಕಾನೂನು ಕ್ರಮ

**ಉದಯರಶ್ಮಿ ನ್ಯೂಸ್**

JSS HOSPITALS
REDEFINING HEALTHCARE

ವಿಜಯಪುರ: ಆರೋಗ್ಯ ಕ್ಷೇತ್ರದಲ್ಲಿ ಹೆಸರು ಮಾಡುತ್ತಿರುವ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಪ್ರಾರಂಭಗೊಂಡಾಗಿನಿಂದಲೂ ತನ್ನ ದಕ್ಷತೆಯು ಮೂಲಕ ಜನಪ್ರೀಯಗೊಳ್ಳುತ್ತಲಿದೆ. ಇದರ ಲಾಭವನ್ನು ಪಡೆದುಕೊಂಡು ಕೆಲವು ವಿರೋಧಿಗಳು ಹಾಗೂ ಸಮಾಜಘಾತುಕ ಶಕ್ತಿಗಳು ನನಗೆ ಸಿದ್ಧೇಶ್ವರ ಸಂಸ್ಥೆಯ ಅವರು ಗೊತ್ತು, ಇವರು ಗೊತ್ತು ಎಂದು ಹೇಳಿಕೊಳ್ಳುತ್ತ, ಜೆಎಸ್ಎಸ್ ಆಸ್ಪತ್ರೆಯಲ್ಲಿ ಕೆಲಸ ಕೊಡಿಸುತ್ತೇನೆ ಎಂದು ಹೇಳಿಕೊಂಡು ದುಡ್ಡು ಕೇಳುತ್ತಿದ್ದಾರೆ ಎನ್ನುವ ಮಾಹಿತಿಯು ನಮಗೆ ಲಭ್ಯವಾಗಿದ್ದು ನಮ್ಮ ಆಸ್ಪತ್ರೆಯಲ್ಲಿ ದುಡ್ಡು ಕೊಟ್ಟವರಿಗೆ ಕೆಲಸ ನೀಡುವ ಕೆಟ್ಟ ವ್ಯವಸ್ಥೆ ಇರುವುದಿಲ್ಲ. ಯಾರಲ್ಲಿ ಪ್ರತಿಭೆ ಇದೆಯೋ ಮತ್ತು ಕಾರ್ಯ ಕ್ಷಮತೆ ಇದೆಯೋ ಅಂಥ-ಹ ಪ್ರತಿಭೆಗಳನ್ನು ಹೆಕ್ಕಿ ಕರ್ತವ್ಯಕ್ಕೆ ನಿಯೋಜನೆ ಮಾಡಿಕೊಳ್ಳುತ್ತೇವೆಯೇ ಹೊರತು ಯಾರದೇ ಒತ್ತಡಕ್ಕೆ ಮಣಿದು ಯಾರನ್ನೂ ಸಹ ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲ. ಸಂಸ್ಥೆಯ ಸದಸ್ಯರು ಯಾರೂ ಸಹ ಈ ವಿಷಯದಲ್ಲಿ ತಲೆ ಹಾಕುವುದಿಲ್ಲ. ಹೀಗಾಗಿ ಜನಪ್ರೀಯತೆ ಪಡೆದುಕೊಳ್ಳುತ್ತಿರುವ ಆಸ್ಪತ್ರೆಯ ಹೆಸರನ್ನು ಹಾಳು ಮಾಡುವುದಕ್ಕೆಂದು ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ಮತ್ತೆ ಕೆಲವರು ಆಸ್ಪತ್ರೆಯ ಹೆಸರು ಹೇಳಿಕೊಂಡು ದುಡ್ಡು ಮಾಡಿಕೊಳ್ಳುವುದಕ್ಕೆ ಮುಂದಾಗುತ್ತಿದ್ದಾರೆ. ಒಂದು ವೇಳೆ ಇಂಥವರ ಮಾತಿಗೆ ಮರುಳಾಗಿ ಹಣ ನೀಡಿದಲ್ಲಿ ಆಸ್ಪತ್ರೆಯಾಗಲಿ, ಸಿದ್ಧೇಶ್ವರ ಸಂಸ್ಥೆಯಾಗಲಿ ಜವಾಬ್ದಾ-ರಿಯಾಗುವುದಿಲ್ಲ. ಅಂಥವರು ಯಾರಾದರು ತಮಗೆ ಕಂಡು ಬಂದಲ್ಲಿ ನೇರವಾಗಿ ಆಸ್ಪತ್ರೆಗೆ ಸಂಪರ್ಕಿಸಿ ದೂರು ನೀಡಬಹುದು. ಇಂಥ ವ್ಯಕ್ತಿಗಳ ಮೇಲೆ ಕಾನೂನು ರೀತಿಯ ಕ್ರಮವನ್ನು ಜರುಗಿಸಲಾಗುವುದು ಎಂದು ಜೆ-ಎಸ್ಎಸ್ ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

# ಶರಣರಿಗೆ ಮರಣವೇ ಮಹಾನವಮಿಯಾಗಿತ್ತು :ಕುಮಾರ ಶ್ರೀ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ತಮ್ಮ ಮಕ್ಕಳ ಜೀವಕ್ಕಿಂತ ನಮಗೆ ವಚನಗಳೇ ಮಿಗಿಲು. ವಚನಗಳ ಸಂರಕ್ಷಣೆಗಾಗಿ ನಮ್ಮ ಮಕ್ಕಳ ಜೊತೆ ಜೊತೆಗೆ ನಾವು ನಮ್ಮ ಪ್ರಾಣವನ್ನೂ ಪಣಕ್ಕಿಟ್ಟು ಹೋರಾಡಿ ಪ್ರಾಣ ಬಿಡುತ್ತೇವೆ ಎಂದು 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಈ ರೀತಿ ದಿಟ್ಟ ಉತ್ತರ ನೀಡಿ ಶರಣರು ಶಪಥ ಮಾಡಿ ಹೋರಾಡಿದ್ದರು. ಶರಣರಿಗೆ ಮರಣವೇ ಮಹಾನವಮಿಯಾಗಿತ್ತೆಂದು ಉಪ್ಪಿನಬೆಟಗೇರಿಯ ಮ.ನಿ.ಪ್ರ.ಸ್ವ.ಕುಮಾರ ವಿರೂಪಾಕ್ಷ ಮಹಾಸ್ವಾಮಿಗಳು ನುಡಿದರು.

ಪಟ್ಟಣದ ಹುಡ್ಕೋದಲ್ಲಿರುವ ಜೆ.ಸಿ.ಶಾಲೆಯಲ್ಲಿ ಬಸವ ಬೆಳಗು ಪಥಸಂಚಲನ ಸಂಪನ್ನಗೊಂಡ ನಂತರ ಅವರು ಆಶೀರ್ವಚನ ನೀಡಿದರು.

12ನೇ ಶತಮಾನದಲ್ಲಿ ಬಸವೇಶ್ವರರು ಅಂತರ್ ಜಾತೀಯ ವಿವಾಹ ಮಾಡಿಸಿದರೆಂದು ಇಲ್ಲಸಲ್ಲದ ಅಪವಾದವನ್ನು ಅವರ ಮೇಲೆ ಹೊರಿಸಿ, ಬಿಜ್ಜಳ ರಾಜನ ಕಿವಿ ಊದಿ ಕೆಲವೊಂದು ದುಷ್ಟರಕೂಟ ಕ್ರಾಂತಿಯ ಕಹಳೆ ಮೊಳಗಿಸಿತು. ಶರಣರನ್ನು ಕೊಲ್ಲುವುದರ ಜೊತೆಗೆ ಅವರು ರಚಿಸಿರುವ ವಚನಗಳನ್ನು ಸರ್ವನಾಶ ಮಾಡಬೇಕೆಂಬುದು ಬಿಜ್ಜಳನ ಸೈನ್ಯದ ಮೂಲ ಉದ್ದೇಶವಾಗಿತ್ತು. ಇದರ ಒಳಮರ್ಮ ಅರಿತ ಶರಣರು ಜೀವದ ಹಂಗುದೊರೆದು ಹೋರಾಡಿ, ಶ್ರೀಶೈಲ ಹಾಗೂ ಉಳವಿಯ ಕಡೆಗೆ ವಚನಗಳನ್ನು ಸಂರಕ್ಷಿಸುತ್ತ ಕಲ್ಯಾಣ ತೊರೆದು ಹೊರಟು ಹೋದರು. ಅಕ್ಕನಾಗಮ್ಮ, ಗಂಗಾಂಬಿಕೆ, ಅಂಬಿಗರ ಚೌಡಯ್ಯ, ಕಕ್ಕಯ್ಯ, ಚೆನ್ನಬಸವಣ್ಣ ಮೊದಲಾದ ಸಹಸ್ರಾರು ಶರಣರು ವಚನಗಳ ರಕ್ಷಣೆ ಮಾಡುತ್ತ ಹೋರಾಡಿ ವೀರಮರಣ ಹೊಂದಿರುವ ವಿಷಯ ಇತಿಹಾಸ ಪುಟಗಳಲ್ಲಿ ಅಚ್ಚಳಿಯದೇ ಉಳಿದು ಗತಕಾಲದ ರಕ್ತ ಚರಿತ್ರೆಯನ್ನು ನಮ್ಮ ಮುಂದೆ ಇಂದಿಗೂ ಬಿಚ್ಚಿಡುತ್ತಿದೆ ಎಂದರು.

ಸಾಹಿತಿ, ಶಿಕ್ಷಕ ರುದ್ರೇಶ ಕಿತ್ತೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದಕ್ಕೂ ಮೊದಲು ಬೆಳಿಗ್ಗೆ 5-30 ರಿಂದ ವಿದ್ಯಾನಗರದಿಂದ ಬಸವ ಬೆಳಗಿನ ಸಂಚಾರ ಆರಂಭಗೊಂಡಿತು. ದಾರಿಯುದ್ದಕ್ಕೂ ಬಸವೇಶ್ವರನ್ನು ಕುರಿತು ಮಾಡಿದ ಜಯಘೋಷ ಮುಗಿಲು ಮುಟ್ಟಿತ್ತು. ಪ್ರತಿಯೊಬ್ಬರ ಮನೆಯ ಮುಂದಿನ ರಂಗುರಂಗಿನ ಚಿತ್ತಾರದ ರಂಗೋಲಿಗಳು ಎಲ್ಲರನ್ನೂ ಕೈ ಬೀಸಿ ಕರೆದು ಮಂತ್ರಮುಗ್ಧಗೊಳಿಸುತ್ತಿದ್ದವು. ಶರಣರ ವ್ಯಕ್ತಿತ್ವ ಕುರಿತು ಗಾಯಕರಿಂದ ಹಾಡಿದ ಹಾಡುಗಳು ಧ್ವನಿವರ್ಧಕದ ಮೂಲಕ ಮಾರ್ಧನಿಸುತ್ತಿದ್ದವು. ಈ ವೇಳೆ ಸಾಹಿತಿಗಳಾದ ಅಶೋಕ ಮಣಿ, ಬಸವರಾಜ ನಾಲತವಾಡ, ಸಿ.ಜಿ.ನಾಗರಾಳ ಪ್ರಮುಖರಾದ ಸಿ.ಪಿ.ಸಜ್ಜನ, ಭರತ ಭೋಸಲೆ, ರಾಜೇಂದ್ರಗೌಡ ರಾಯಗೊಂಡ, ಭಾಜಪಾ ಜಿಲ್ಲಾ ಕಾರ್ಯದರ್ಶಿ ಕಾಶಿಬಾಯಿ ರಾಂಪೂರ, ಪುರಸಭೆ ಸದಸ್ಯೆಯರಾದ ಪ್ರೀತಿ ದೇಗಿನಾಳ, ಸಂಗಮ್ಮ ದೇವರಳ್ಳಿ, ಭಾರತಿ ಪಾಟೀಲ, ಗಾಯಕಿ ದೀಪರತ್ನಶ್ರೀ, ವಿಜಯಲಕ್ಷ್ಮಿ ಗಡೇದ ಸೇರಿದಂತೆ ಮತ್ತೀತರರು ಇದ್ದರು.

# ನಮ್ಮ ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು :ಗೌಡರ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಆನೆಕಾಲು ರೋಗವು ಪೈಲೇರಿಯಾ ಸೊಂಕುವುಳ್ಳ ಕ್ಯೂಲೆಕ್ಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಹಾಗಾಗಿ ಮುಖ್ಯವಾಗಿ ನಾವು ವಾಸಿಸುವ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಆರೋಗ್ಯ ನಿರೀಕ್ಷಣಾಧಿಕಾರಿ ಎಮ್.ಎಸ್.ಗೌಡರ ಹೇಳಿದರು.

ತಾಲೂಕಿನ ಕೊಳೂರು ಗ್ರಾಮದಲ್ಲಿ ಆನೆಕಾಲು ರೋಗ ತಪಾಸಣೆ ವೇಳೆ ಅವರು ಮಾತನಾಡಿದರು.

ರೋಗದ ನಿಯಂತ್ರಣಕ್ಕಾಗಿ ಹಾಗೂ ರೋಗಿಗಳ ಪತ್ತೆ ಮಾಡುವುದು ಅತ್ಯಂತ ಕಷ್ಟಕರವಾಗಿದ್ದು, ಆನೆಕಾಲು ರೋಗದ ಪತ್ತೆಗಾಗಿ ರಾತ್ರಿ ವೇಳೆಯಲ್ಲಿಯೇ ರಕ್ತದ ಮಾದರಿ ಸಂಗ್ರಹಿಸಬೇಕಾಗುತ್ತದೆ. ಆರೋಗ್ಯ ಇಲಾಖೆಯ ನಿರ್ದೇಶನದಂತೆ ತಾಲೂಕಿನಾದ್ಯಂತ ಪ್ರಾಥಮಿಕ ಆರೋಗ್ಯ ಕೇಂದ್ರವಾರು ಸಮೀಕ್ಷೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ. ಆನೆಕಾಲು ರೋಗದವರಿಗೆ ಕಚ್ಚಿದ ಸೊಳ್ಳೆ, ಆರೋಗ್ಯವಂತರಿಗೆ ಕಚ್ಚಿದರೂ ರೋಗ ಹರಡುತ್ತದೆ. ಈ ರೋಗವು ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬ-ರಿಂದೊಬ್ಬರಿಗೆ ಹರಡುತ್ತದೆ. ಸೊಳ್ಳೆ ಕಚ್ಚಿ 5 ರಿಂದ 7 ವರ್ಷಗಳವರೆಗೆ ಸೋಂಕಿರುವುದು ಕಾಣುವುದಿಲ್ಲ. ಮೊದಲ ಹಂತದಲ್ಲಿ ಆಗಾಗ್ಗೆ ಜ್ವರ ಕಾಣಿಸಿಕೊಳ್ಳುತ್ತದೆ. ಹಂತ ಹಂತವಾಗಿ, ಕಾಲು, ಕೈ, ವೃಷಣ, ಸ್ತನಗಳಲ್ಲಿ ಊತ ಕಂಡು ಬರುತ್ತಿರುತ್ತದೆ. ರಕ್ತ ಪರೀಕ್ಷೆಯಲ್ಲಿ ಆನೆಕಾಲು ರೋಗದ ರೋಗಾಣು ಪತ್ತೆಯಾದಲ್ಲಿ ಅದನ್ನು ಡಿಇಸಿ ಮಾತ್ರೆಗಳ ಮೂಲಕ ನಿಯಂತ್ರಿಸಬಹುದು. ಮೊದಲ ಆರು ದಿನಗಳು ಮಧ್ಯ ಒಂದು ದಿನ ಬಿಟ್ಟು ನಂತರ ಆರು ದಿನಗಳ ಕಾಲ ಚಿಕಿತ್ಸೆ ನೀಡಲಾಗುತ್ತದೆ. ಒಟ್ಟು 13 ದಿನಗಳ ಕಾಲ ರೋಗಿಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ ಇದಕ್ಕಾಗಿ ಶಿಬಿರಗಳನ್ನು ಆಯೋಜಿಸಿ, ರೋಗಿಗಳನ್ನು ಗುರುತಿಸುವ ಕರ್ಯ ಮಾಡಲಾಗುತ್ತಿದೆ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಕೊಳೂರು ಗ್ರಾಮದಲ್ಲಿ ರಾತ್ರಿ 8:30 ರಿಂದ ಮಧ್ಯರಾತ್ರಿ 12 ರ ವರೆಗೆ ಪರೀಕ್ಷೆ ನಡೆಸಿದರು. ಈ ಸಂದರ್ಭದಲ್ಲಿ ಸುಮಾರು 154 ಜನರ ರಕ್ತ ಲೇಪನಗಳನ್ನು ಸಂಗ್ರಹಿಸಿ ಅವುಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ತಲುಪಿಸಲಾಯಿತು.

ಈ ಸಮೀಕ್ಷಾ ಕಾರ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಮಮ್ಮದ್ ರಫೀಕ್ ನಾಗರಳ, ಬಿ.ಎಸ್.ಶಿವಯೋಗಿಮಠ, ಎಸ್.ಐ.ಕಮಲಪ್ಪನವರ, ಐ.ಬಿ.ಹೂಗಾರ, ಸಿ.ಜಿ.ಬಿದರಕುಂದಿ, ಇಸ್ಮಾಯಿಲ್ ವಾಲಿಕಾರ, ಎಸ್.ಆರ್.ಸಜ್ಜನ, ರೇಷ್ಮಾ ರೂಡಗಿ ಸೇ-ರಿದಂತೆ ಆಶಾ ಕಾರ್ಯಕರ್ತೆಯರು ಹಾಜರಿದ್ದು ಕಾರ್ಯನಿರ್ವಹಿಸಿದರು.

# ಡಿ.20ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರಕ್ಕೆ ಕೊಲ್ಹಾರ ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರು ಸರಬರಾಜು ಆಗುವ ಪ್ರದೇಶಗಳಿಗೆ ಡಿ.20ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಜಲಮಂಡಳಿಯೊಂದಿಗೆ ಸಹಕ-ರಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೋರಿದ್ದಾರೆ.

ನಗರಕ್ಕೆ ಕುಡಿಯುವ ನೀರು ಸರಬರಾಜಾಗುವ ಮುಳವಾಡ ಮಧ್ಯಂತರ ಪಂಪಿನ ಮನೆಯಿಂದ ಜಲನಗರ ಪಂಪಿನ ಮನೆಯವರೆಗೆ ಅಳವಡಿಸಿರುವ 900ಎಂ.ಎಂ ವ್ಯಾಸದ ಪಿ.ಎಸ್.ಸಿ ಮುಖ್ಯ ಏರು ಕೊಳವೆ ಮಾರ್ಗದ ಚೈನೇಜ್ 38.000 ಕಿ.ಮೀ ಪ್ರಾರ್ಥನಾ ಶಾಲೆ ಹತ್ತಿರ, ಚೈನೇಜ್ 38.100 ಕಿ.ಮೀ ಪ್ರಾರ್ಥನಾ ಶಾಲೆ ಹತ್ತಿರ ಮತ್ತು ಚೈನೇಜ್ 39.500 ಕಿ.ಮೀ ಕರ್ಮಾ ಕೆಫೆ ಹತ್ತಿರದ ಕೊಳವೆ ಮಾರ್ಗದಲ್ಲಿ ನೀರು ಸೋರುತ್ತಿದ್ದು, ತುರ್ತು ದುರಸ್ತಿ ಕಾಮಗಾರಿ ಕೈಗೊಳ್ಳುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಅವರು ಮನವಿ ಮಾಡಿದ್ದಾರೆ.

# ಪ್ರತಿಭಾ ಕಾರಂಜಿ ಜಿಲ್ಲಾ ಮಟ್ಟಕ್ಕೆ ಆಯ್ಕೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ ಹಾಗೂ ನಗರದವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ವತಿಯಿಂದ ನಡೆದ ತಾಲ್ಲೂಕ ಮಟ್ಟದ ಪ್ರತಿಭಾ ಕಾರಂಜಿಯ ವಿವಿಧ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬಿಇಓ ಬಸವರಾಜ ತಳವಾರ ಪ್ರಶಸ್ತಿ ಪತ್ರ ನೀಡಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಪ್ರತಿ ಮಗುವಿನಲ್ಲೂ ಒಂದು ವಿಶೇಷ ಪ್ರತಿಭೆ ಇದ್ದೇ ಇರುತ್ತದೆ. ಆ ಪ್ರತಿಭೆಯನ್ನು ಹೊರ ಹಾಕಲು ಪ್ರತಿಭಾ ಕಾರಂಜಿ ವೇದಿಕೆ ಸಹಕಾ-ರಿಯಾಗಿದ್ದು, ಜಿಲ್ಲಾ ಮಟ್ಟದಲ್ಲೂ ಸಹ ಆಯ್ಕೆಯಾಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನೌಕರ ಸಂಘದ ಜಿಲ್ಲಾ ಅಧ್ಯಕ್ಷ ಸುರೇಶ ಶಡಶ್ಯಾಳ, ಖಜಾಂಚಿ ಜುಬೇರ ಕೇರೂರ, ನಾರಾಯಣ ಬಂಡಗಾರ, ಎ.ಎಫ್.ಅರಳಿಮಟ್ಟಿ, ಬಸಿರ್ ನದಾಫ್, ಎ.ಎಸ್.ಹಕ್ಕಿ, ವೀರಭದ್ರಪ್ಪ, ಬಸವರಾಜ ಗಿರಿನಿವಾಸ, ಶಿಕ್ಷಕರು ಹಾಗೂ ಮಕ್ಕಳು ಇದ್ದರು.

# ವಿಜೃಂಭಣೆಯ ಮೋರಟಗಿ ವೀರಭದ್ರೇಶ್ವರ ಜಾತ್ರೆ ಸಂಪನ್ನ



**ಉದಯರಶ್ಮಿ ನ್ಯೂಸ್**

ಮೋರಟಗಿ: ಗ್ರಾಮದ ಆರಾಧ್ಯದೇವ ಶ್ರೀ ವೀರಭದ್ರೇಶ್ವರ ಜಾತ್ರೆ ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ವಾದ್ಯ ವೈಭವದೊಂದಿಗೆ ಬಹಳಷ್ಟು ವಿಜೃಂಭಣೆಯಿಂದ ಜರುಗಿತು. ಜಾತ್ರೆಯಲ್ಲಿ ಸಿಂದಗಿ ಶಾಸಕ ಅಶೋಕ ಮನಗೂಳಿ ಪಾಲ್ಗೊಂಡಿದ್ದರು.

ಶನಿವಾರ ಭಕ್ತರು ಶ್ರೀ ವೀರಭದ್ರೇಶ್ವರ ಮೂರ್ತಿ ಪಲ್ಲಕ್ಕಿಯೊಂದಿಗೆ ಸಮೀಪದ ಭೀಮಾ ನದಿಯಲ್ಲಿ ಗಂಗಾಸ್ನಾನ ಮುಗಿಸಿಕೊಂಡು ಪಲ್ಲಕ್ಕಿ ಮೂಲ ಸ್ಥಳಕ್ಕೆ ತಲುಪಿತು ರವಿವಾರ ಬೆಳಗಿನಜಾವ 5.30 ಗಂಟೆಗೆ ಮೋರಟಗಿ ಸೇರಿದಂತೆ ವಿವಿಧ ಜಿಲ್ಲೆಯ ವೀರಭದ್ರೇಶ್ವರ ಭಕ್ತಾದಿಗಳು ಅಗ್ನಿ ಸ್ಪರ್ಶ ಮಾಡಿದರು ಅಗ್ನಿ ಸ್ಪರ್ಶದಲ್ಲಿ ಮಹಿಳೆಯರು ಕೂಡಾ ಇದ್ದರು.

ಪುರವಂತರ ಆಗಮನ:ಗುಲ್ಬರ್ಗ, ವಿಜಯಪುರ ಶಾಹಾಪುರ ಇಂಡಿ ಮಂದೇವಾಲ, ಜೇವರ್ಗಿ ಕಕ್ಕಳಮೆಲಿ, ಹಂಚಿನಾಳ, ನ್ಯಾವನೂರ, ಮಲಘಾಣ ಗಾಬಸಾವಳಗಿ, ಸೇರಿದಂತೆ ವಿವಿಧ ತಾಲೂಕಿನಿಂದ ಪುರವಂತರು ಆಗಮಿಸಿ ವಿಶಿಷ್ಟ ರೀತಿಯಲ್ಲಿ ಸಸ್ತ ಹಾಕಿ ಗಮನ ಸೆಳೆದರು.

ವೀರಭದ್ರೇಶ್ವರ ಪಲ್ಲಕ್ಕಿ ಮೆರವಣಿಗೆ: ಬೆಳಗಿನ ಜಾವ ಅಗ್ನಿಸ್ಪರ್ಶ ಮುಗಿದ ನಂತರ ಪಲ್ಲಕ್ಕಿ ಮೆರವಣಿಗೆ ಪ್ರಾರಂಭವಾಗಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಡೊಳ್ಳು ಕುಣಿತ, ಕುದುರೆ ಕುಣಿತದೊಂದಿಗೆ ಸಂಚರಿಸಿ ಮಧ್ಯಾನ್ಹ 2 ಗಂಟೆಗೆ ಗುಡಿ ಸೇರಿತು. ನಂತರ ವಿವಿಧ ಗ್ರಾಮಗಳಿಂದ ಬಂದಂತ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಿದರು 6 ಗಂಟೆಗಳ ಕಾಲ ನೂರಾರು ಮುತ್ತೈದೆಯರು ಕಳಸ ಹಿಡಿದು ಶ್ರೀ ವೀರಭದ್ರೇಶ್ವರ ಭಕ್ತಿಗೆ ಪಾತ್ರರಾದರು.

ಜಾತ್ರೆಯಲ್ಲಿ ಶಾಸಕ ಅಶೋಕ್ ಮನಗೂಳಿ ಭಾಗಿ: ಪಲ್ಲಕ್ಕಿ ಮೆರವಣಿಗೆ ಪ್ರಾರಂಭ ಆಗುತ್ತಿದ್ದಂತೆ ಆಗಮಿಸಿದ ಶಾಸಕ ಅಶೋಕ ಮನಗೂಳಿ ಕಾಲ್ನಡಿಗೆ ಮೂಲಕ ಮುಖ್ಯ ಬಜಾರ ರಸ್ತೆಯವರೆಗೆ ಆಗಮಿಸಿ ಪುರವಂತ–ರಿಗೆ ವೈಯಕ್ತಿಕವಾಗಿ ಸಹಾಯ ಧನ ನೀಡಿದರು.



ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಸಿಬ್ಬಂದಿ ಬಂದೋಬಸ್ತ್ ಒದಗಿಸಿದರು.

ಶ್ರೀ ವೀರಭದ್ರೇಶ್ವರ ಸಮೀತಿಯಲ್ಲಿ ರೇವಣಸಿದ್ಧ ಮಸಳಿ, ಬಿ ಟಿ ಬೋನಾಳ, ಸಂತೋಷ ಶಾಬಾದಿ,ಡಾ, ರಾಜು ಪತ್ತಾರ, ಪ್ರಕಾಶ ನೆಲ್ಲಗಿ, ರವೀಂದ್ರ ಕುಲಕರ್ಣಿ, ಜಾತ್ರೆಯ ಉಸ್ತುವಾರಿ ವಹಿಸಿದ್ದರು.

# ಸಂಭ್ರಮದ ಬಲಭೀಮೇಶ್ವರ ಕಾರ್ತಿಕೋತ್ಸವ

**ಉದಯರಶ್ಮಿ ನ್ಯೂಸ್**

ಬ್ರಹ್ಮದೇವನಮಡು: ಸಿಂದಗಿ ತಾಲೂಕಿನ ಸುಕ್ಷೇತ್ರ ಬ್ರಹ್ಮದೇವನಮಡು ಗ್ರಾಮದ ಆರಾಧ್ಯ ದೈವ ಶ್ರೀ ಬಲಭೀಮೇಶ್ವರ (ಹನುಮಾನ) ದೇವರ (ಚಟ್ಟಿ) ಕಾರ್ತಿಕೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ರಾತ್ರಿ ನೆರವೇರಿತು.

ಕಾರ್ತಿಕೋತ್ಸವ ನಿಮಿತ್ತ ದೇವಸ್ಥಾನದಲ್ಲಿ ಬೆಳಗ್ಗೆ ವಿಶೇಷ ಪೂಜೆ ಹಾಗೂ ಹೂವಿನ ಅಲಂಕಾರ ಮಾಡಲಾಗಿತ್ತು. ದೇವಸ್ಥಾನ ವಿವಿಧ ಬಣ್ಣದ ವಿದ್ಯುತ್ ಅಲಂಕಾರ,ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ರಾತ್ರಿ 8 ಗಂಟೆಯಿಂದ ಭಕ್ತರಿಗೆ ಭಜ್ಜಿ, ರೊಟ್ಟಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಇಡೀ ರಾತ್ರಿ ಖಾನಾಪೂರ,ಹಿರೇ ಅಲ್ಲಾಪೂರ, ಹೊನ್ನಳ್ಳಿ, ಮಾಗಣಗೇರಾ, ಕಣಮೇಶ್ವರ ಭಜನಾ ಮಂಡಳಿಯವರು ಭಜನಾ ಸೇವೆ ಸಲ್ಲಿಸಿದರು.



ಅರ್ಚಕರಾದ ನಿಂಗಣ್ಣಾಚಾರ್ಯ ಜೋಶಿ,ಸಿದ್ದಯ್ಯ ಮಠ, ಮುಖಂಡ ರುದ್ರಣ್ಣಸಾಹು ಮಾನಶೆಟ್ಟಿ, ಕಮೀಟಿ ಅಧ್ಯಕ್ಷ ರೇವಣಸಿದ್ದಸಾಹು ಕೋರವಾರ, ಮಲ್ಲಿಕಾರ್ಜುನ ಮನಗೂಳಿ, ದೇವಿಂದ್ರ ತೊನಶ್ಯಾಳ, ಚಂದ್ರಶೇಖರ ಮನಗೂಳಿ, ಎಚ್.ಕೆ.ಸೀತನೂರ, ಬಾಲಚಂದ್ರ ಕ–ರಿಕಲ್ಲ್, ಎಸ್.ವೈ.ಅಮರಗೋಳ, ನಡಗೇರಪ್ಪ ತಳವಾರ, ಮಲ್ಲಿಕಾರ್ಜುನ ಕೊಟಾರಗಸ್ತಿ, ನಾನಾಗೌಡ ಪಾಟೀಲ, ಮಲ್ಲಪ್ಪ ಪೂಜಾರಿ, ನಾಗಣ್ಣ ಪಡೆಕನೂರ, ಕರೇಪ್ಪ ಅಮರಗೋಳ, ಶಿವಪ್ಪ ಕರಿಕಲ್ಲ್, ಡಿ.ಬಿ.ಸೀತನೂರ, ವೀರಭದ್ರ ಬಡಿಗೇರ, ಪತ್ರಕರ್ತ ಮಲ್ಲು ಕೆಂಭಾವಿ, ಲಾಲಸಾ ರಾಜಾಕೋಳ, ಚಂದ್ರಶೇಖರ ಕೆಂಭಾವಿ, ಮನೋಹರ ಗುಡಿಮನಿ, ಅಂಬ್ರುತ್ ದೊಡ್ಡಮನಿ ಸೇರಿ ಬಲಭೀಮೇಶ್ವರ ದೇವರ ಭಕ್ತರು ಪಾಲ್ಗೊಂಡಿದ್ದರು.

# ಕ್ರೀಡಾ ಶಾಲೆ ವಸತಿ ನಿಲಯಗಳಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ

**ಉದಯರಶ್ಮಿ ನ್ಯೂಸ್**

ವಿಜಯಪುರ: 2024–25ನೇ ಸಾಲಿನ ಜಿಲ್ಲಾ ಕ್ರೀಡಾ ಶಾಲೆ ಮತ್ತು ವಸತಿ ನಿಲಯಗಳಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಡಿ.18ರಿಂದ ಪ್ರಾರಂಭಗೊಂಡಿದ್ದು, ಜ.2ರವರೆಗೆ ಆಯಾ ತಾಲೂಕಿನಲ್ಲಿ ಬೆಳಿಗ್ಗೆ 9:30ರಿಂದ ನಡೆಯಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಡಿ. 19ರಂದು ಚಡಚಣ ತಾಲೂಕಿನ ಚಡಚಣ ಶ್ರೀ ಸಂಗಮೇಶ್ವರ ಪ್ರೌಢಶಾಲೆ ಮೈದಾನದಲ್ಲಿ ತರಬೇತಿ–ದಾರ ಸಲ್ಲಾವುದ್ದೀನ ಮಳಗಿ (ಮೊ: 9901747866), ದೇವರಹಿಪ್ಪರಗಿ ತಾಲೂಕಿನ ದೇವರಹಿಪ್ಪರಗಿ ಬಿಎಲ್‌ಡಿಇ ಕಾಲೇಜು ಆವರಣದಲ್ಲಿ ಬಸವರಾಜ ಬೆಳ್ಳುಬ್ಬಿ (ಮೊ:9972691179) ಹಾಗೂ ಬಬಲೇಶ್ವರ ತಾಲೂಕಿನ ಬಬಲೇಶ್ವರದ ಶಾಂತವೀರ ಪ್ರೌಢಶಾಲೆ ಮೈದಾನದಲ್ಲಿ ಸದಾಶಿವ ಅಮರಪ್ಪಗೋಳ (ಮೊ:9742681994), ಡಿ.20 ರಂದು ವಿಜಯಪುರ ತಾಲೂಕಿಗೆ ಸಂಬಂಧಿಸಿದಂತೆ ನಗರದ ಜಿಲ್ಲಾ ಕ್ರೀಡಾಂಗಣ ಮೈದಾನದಲ್ಲಿ ತರಬೇತಿ–ದಾರ ರಾಜು ಚವ್ಹಾಣ (ಮೊ: 7019167243) ಹಾಗೂ ಇಂಡಿ ತಾಲೂಕು ಕ್ರೀಡಾಂಗಣದಲ್ಲಿ ಯಲ್ಲಪ್ಪ ಜಂಪ್ಲೆ (ಮೊ:9845007342), ಡಿ.21 ರಂದು ಕೋಲ್ಹಾರ ತಾಲೂಕಿನ ಕೋಲ್ಹಾರ ಶ್ರೀ ಸಂಗಮೇಶ್ವರ ಪ್ರೌಢಶಾಲೆ ಮೈದಾನದಲ್ಲಿ ತರಬೇತಿ–ದಾರ ಸದಾಶಿವ ಅಮರಪ್ಪಗೋಳ (ಮೊ:9742681994) ಹಾಗೂ ತಿಕೋಟಾ ತಾಲೂಕಿನ ತಿಕೋಟಾ ಬಿ.ಎಲ್.ಡಿ.ಇ ಪ್ರೌಢಶಾಲೆ ಆವರಣದಲ್ಲಿ ರಾಜು ಚವ್ಹಾಣ (ಮೊ:7019167243) ಅವರು ಆಯ್ಕೆ ಪ್ರಕ್ರಿಯೆ ನಡೆಸಲಿದ್ದಾರೆ.

ಡಿ.26 ರಂದು ಬಸವನ ಬಾಗೇವಾಡಿ ತಾಲೂಕಿನ ಬ.ಬಾಗೇವಾಡಿ ಶ್ರೀ ಬಸವೇಶ್ವರ ಪಿ.ಯು. ಕಾಲೇಜು ಮೈದಾನದಲ್ಲಿ ಮಹ್ಮದರಫಿ ನದಾಫ್ (ಮೊ:9886115909) ಹಾಗೂ ಆಲಮೇಲ ತಾಲೂಕಿನ ಆಲಮೇಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ತರಬೇತಿದಾರ ಸಲ್ಲಾವುದ್ದೀನ ಮಳಗಿ (ಮೊ:9901747866), ಡಿ.28 ರಂದು ನಿಡಗುಂದಿ ಸರಕಾರಿ ಪ್ರಾಥ–ಮಿಕ ಮಣಗೂರ ಆವರಣದಲ್ಲಿ ತರಬೇತಿದಾರ ಮಹ್ಮದರಫಿ ನದಾಫ್ (ಮೊ:9886115909), ಡಿ. 29ರಂದು ಮುದ್ದೇಬಿಹಾಳ ಸರಕಾರಿ ಪ್ರೌಢಶಾಲೆ ಮೈದಾನದಲ್ಲಿ ಮಲ್ಲನಗೌಡ ಪಾಟೀಲ (ಮೊ:9901449337) ಮತ್ತು ಜ. 02 ರಂದು ತಾಳಿಕೋಟಿ ಶ್ರೀ ಖಾಸ್ಗತೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಮಲ್ಲನಗೌಡ ಪಾಟೀಲ ಅವರು ಹಾಗೂ ತರಬೇತಿದಾರರು ಭಾಗವಹಿಸಿ ಆಯ್ಕೆ ಪ್ರಕ್ರಿಯೆ ನಡೆಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ತರಬೇತಿದಾರರನ್ನು ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಮೊ: 8792185141 ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಭಿವೃದ್ಧಿ ಪಥದತ್ತ ಕೊಲ್ಹಾರ ಪಟ್ಟಣ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಹಳೇ ಗ್ರಾಮ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿ ಮುಳಗಡೆಯಾಗಿ ಹೊಸ ಭರವಸೆಯಲ್ಲಿ ಪುನರ್ವಸತಿ ಕೇಂದ್ರ ನಿರ್ಮಾಣವಾಗಿ 25 ವರ್ಷಗಳು ಗತಿಸುವ ಸಂದರ್ಭದಲ್ಲಿ ಕೆಲವು ಅಡೆ ತಡೆಗಳ ಮಧ್ಯದಲ್ಲಿಯೂ ಅಭಿವೃದ್ಧಿ ಪಥದತ್ತ ಕೊಲ್ಹಾರ ಪಟ್ಟಣ ಸಾಗುತ್ತಿರುವುದು ಇಲ್ಲಿನ ಸಾರ್ವಜನರಲ್ಲಿ ಒಂದು ಕಡೆ ಸಂತಸವಾದರೆ ಇನ್ನೊಂದು ಕಡೆ ಆಗಬೇಕಾದ ಕಾಮಗಾರಿಗಳ ಪಟ್ಟಿ ದೊಡ್ಡದಾಗಿದೆ.

ಬಸವನ ಬಾಗೇವಾಡಿ ಮತಕ್ಷೇತ್ರದ ನಾಲ್ಕು ಬಾರಿ ಶಾಸಕರಾಗಿ ಮತ್ತು ಎರಡು ಬಾರಿ ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶಿವಾನಂದ ಪಾಟೀಲರ ಪರಿಶ್ರಮದ ಫಲವಾಗಿ ವಿವಿಧ ಇಲಾಖೆಗಳ ನೂರಾರು ಕೋಟಿ ಅನುದಾನ ಮಂಜೂರಾಗಿ ಕಾಮಗಾ–ರಿಗಳು ಭರಪೂರ ಸಾಗುತ್ತಿರುವಾಗ ಸಾರ್ವಜನಿಕರ ಸಹಕಾರ ಒಮ್ಮತದಿಂದ ಮೂಡುತ್ತಿರುವದು ಸ್ಥಳಿಯ ನಾಗ–ರಿಕರು ಕೂಡ ಶಾಸಕರಿಗೆ ಸಹಕಾರ ಕೊಟ್ಟಂತಾಗಿದೆ ಆದರೆ ಇಲ್ಲೊಂದು ಪ್ರಶ್ನೆ ಉದ್ಭವಿಸಿದೆ.



ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 17 ವಾರ್ಡುಗಳು ಇದರಲ್ಲಿ ಮೂರು ಜನ ಬಿಜೆಪಿ ಪಕ್ಷವನ್ನು ಪ್ರತಿನಿಧಿಸುವ ಸದಸ್ಯರು, ಉಳಿದಂತೆ 14 ಜನ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ತಮ್ಮ ವಾರ್ಡುಗಳನ್ನು ಪ್ರತಿನಿಧಿಸುತ್ತಾರೆ. ಅಭಿವೃದ್ಧಿ ಎಂದರೆ ಎಲ್ಲ ವಾರ್ಡುಗಳು ಏಕಕಾಲಕ್ಕೆ ಅಭಿವೃದ್ಧಿಯಾದರೆ ಸಮಗ್ರ ದೃಷ್ಟಿಕೋನದಿಂದ ಅಭಿವೃದ್ಧಿಪಡಿಸುತ್ತಿದ್ದಾರೆ ಎನ್ನಬಹುದು ಇಲ್ಲಿ ಕೆಲವು ಕಡೆ ಮಾತ್ರ ಕಾಮಗಾರಿಗಳು ನಡೆಯುತ್ತಿದ್ದು ಉಳಿದ ಕಡೆ ಯಾವಾಗ ಎನ್ನುವದು ಜನರಲ್ಲಿ ಆಶಾಭಾವನೆ ಮೂಡುತ್ತಿದೆ.

ರಸ್ತೆಯ ಎರಡು ಬದಿ ಗಟ್ಟಮುಟ್ಟಾದ ಗಟಾರಗಳ ವ್ಯವಸ್ಥೆ ಒಳಚರಂಡಿಗೆ ಮನೆ ಮನೆಯ ಶೌಚಾಲಯ ಹಾಗೂ ಬಚ್ಚಲುಮನೆಯ ಪೈಪಲೈನ್ ಜೋಡಣಾ ಕಾರ್ಯ ಮತ್ತು 6,9,12,18 ಮೀಟರ್ ಅಳತೆಯ ರಸ್ತೆಗಳಲ್ಲಿ ಮೊಹರಂ, ಖಡಿಕರಣ, ಡಾಂಬರೀಕರಣ ಕಾಮಗಾರಿಗಳು ಸುಸಜ್ಜಿತವಾಗಿ ಅಧಿಕಾರಿಗಳ ಮತ್ತು ಗುತ್ತಿಗೆದಾರರ ಸಮ್ಮುಖದಲ್ಲಿ ಸಾಗುತ್ತಿವೆ. ಆದರೆ ಪುನರ್ವಸತಿ ಕೇಂದ್ರದಲ್ಲಿ ಇರುವ ಎಲ್ಲ ಅಳತೆಯ ರಸ್ತೆಗಳು ಅಂದಾಜು 80 ಕಿ.ಮೀ ವ್ಯಾಪ್ತಿ ಪ್ರದೇಶವನ್ನು ಹೊಂದಿರುತ್ತವೆ ಎಂದು ತಿಳಿದುಬಂದಿದ್ದು ಇದೇ ರೀತಿ ಆಮೆಗತಿಯಲ್ಲಿ ರಸ್ತೆಗಳ ಅಭಿವೃದ್ಧಿ ನಡೆದರೆ ಪೂರ್ಣವಾಗಲು ಎಷ್ಟು ವರ್ಷಗಳು ಗತಿಸಬಹುದು.



ಆಗಬೇಕಾದ ಕಾಮಗಾರಿಗಳು: ಕೃಷ್ಣೆ ಮಗ್ಗುಲಲ್ಲಿ ಹರಿದರೂ ಎರಡು ದಿನಕ್ಕೊಮ್ಮೆ ನಲ್ಲಿಗಳ ಮುಖಾಂತರ ನೀರಿನ ಸರಬರಾಜು ಆಗುತ್ತಿದ್ದು ದಿನನಿತ್ಯ ಸರಾಗವಾಗಿ ಮನೆ ಮನೆಗೆ ನೀರು ಪೂರೈಕೆಯಾಗಬೇಕಾದರೆ ಕೊಲ್ಹಾರ ಪಟ್ಟಣಕ್ಕೆ ನದಿ ಮೂಲದಿಂದ ಪ್ರತ್ಯೇಕವಾದ ಕುಡಿಯುವ ಪೈಪಲೈನ್ ಜೋಡಣೆ ಮಾಡುವದು ಮತ್ತು ಊರಿನ ನಾಲ್ಕು ದಿಕ್ಕಿನ ಎತ್ತರವಾದ ಪ್ರದೇಶದಲ್ಲಿ ಜಲಸಂಗ್ರಹ ಟ್ಯಾಂಕಗಳ ನಿರ್ಮಾಣವಾಗಬೇಕು, ಈಗಿರುವ ಟ್ಯಾಂಕ್‌ಗಳು ಈಗಿನ ಜನಸಂಖ್ಯೆ ಮುಂದಿನ ಬೆಳವಣಿಗೆಯ ಜನಸಂಖ್ಯೆಗೆ ಅನುಗುನವಾಗಿ ನಿರ್ಮಾಣವಾಗಿರುವದಿಲ್ಲ ಎನ್ನುವದನ್ನು ಅಧಿಕಾರಿಗಳು ಗಮನಿಸಿ ಕ್ರಮ ಕೈಗೊಳ್ಳಬೇಕೆನ್ನುವದು ಸಾರ್ವಜನಿಕರ ಅಭಿಪ್ರಾಯವಾಗಿದೆ.


ರಾಷ್ಟ್ರೀಯ ಹೆದ್ದಾರಿ 218ರಿಂದ ಎರಡು ಕಡೆಗಳಿಂದ ಪುರ ಪ್ರವೇಶವಾಗುವಾಗ ರಸ್ತೆ ಮಾರ್ಗ ಅತ್ಯಂತ ಚಿಕ್ಕದಾಗಿದ್ದು ದ್ವಿಪಥ ರಸ್ತೆಯನ್ನಾಗಿ ಅಗಲೀಕರಣ ಮಾಡುವದು, ಪಟ್ಟಣದಲ್ಲಿರುವ ಎಲ್ಲ 18ಮೀ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡ ನಂತರ ಹಾಗೂ ಅಂಬೇಡ್ಕರ ವೃತ್ತದಿಂದ ರಾಚೋಟೇಶ್ವರ ದೇವಸ್ಥಾನದ ಮಾರ್ಗವಾಗಿ ಯುಕೆಪಿ ಕಾರ್ಯಾಲಯಕ್ಕೆ ತೆರಳುವ ರಸ್ತೆಯನ್ನು ಸೇರಿ ಪ್ರಕರತೆಯನ್ನು ಹೊಂದಿರುವ ಆಧುನಿಕ ತಂತ್ರಜ್ಞಾನದ ಬೀದಿ ದೀಪಗಳ ಅಳವಡಿಕೆ ಕಾಮಗಾರಿಯನ್ನು ಕೈಗೊಳ್ಳಬೇಕು ಹಾಗೂ ರಸ್ತೆಗಳ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಈಗಿರುವ ವಿದ್ಯುತ್ ಕಂಬಗಳು ರಸ್ತೆ ಮಧ್ಯದಲ್ಲಿಯೇ ಬರುವಂತಹ ಸನ್ನಿವೇಶ ಸೃಷ್ಟಿಯಾಗಿದ್ದು ಅವುಗಳನ್ನು ತೆರವುಗೊಳಿಸಿ ರಸ್ತೆ ಬದಿಯಲ್ಲಿ ಕಂಬಗಳನ್ನು ನಿಲ್ಲಿಸಲು ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಳ್ಳಬೇಕು.

# ಜ್ಞಾನಯೋಗಿಗೆ ಕೋಟಿ–ಕೋಟಿ ನಮನ

**ಉದಯರಶ್ಮಿ ದಿನಪತ್ರಿಕೆ**

ನಿಮ್ಮ
ತನು ಶುದ್ಧ
ಭಾವ ಶುದ್ಧ
ನಡೆ ಶುದ್ಧ
ನುಡಿ ಶುದ್ಧ
ನುಡಿದಂತೆ ನಡೆದು
ತೋರಿದ ಜ್ಞಾನಯೋಗಿಯೇ
ನಿಮಗೆ ಕೋಟಿ ಕೋಟಿ ನಮನ

ನೀವು
ಎಂದೂ
ಪ್ರಶಸ್ತಿ – ಪುರಸ್ಕಾರ ನಿರೀಕ್ಷಿಸಿದವರಲ್ಲ
ಸನ್ಮಾನ ಉಡುಗೊರೆ ಬಯಸಿದವರಲ್ಲ
ಯಾರ ಮನವೂ ನೋಯಿಸಿದವರಲ್ಲ
ಬಿರುನುಡಿಗಳೆಂದೂ
ಆಡಿದವರಲ್ಲ.
ಬದುಕಿದರೆ ಹೀಗೆ ಬದುಕಬೇಕೆಂಬ
ಜೀವನಪಾಠ ಕಲಿಸಿಕೊಟ್ಟ
ಜ್ಞಾನಯೋಗಿಯೇ
ನಿಮಗೆ ಕೋಟಿ ಕೋಟಿ ನಮನ



ನೀವು
ಜ್ಞಾನದ ಗಣಿ
ಶಾಂತಮೂರ್ತಿ
ಗಿಡ– ಮರ
ಪಶು – ಪಕ್ಷಿ
ಪ್ರಕೃತಿಯಲ್ಲಿ
ದೇವನ ರೂಪ
ಕಂಡವರು.
ಜಾತಿ–ಮತ
ಪಂಥವನ್ನು
ಮೀರಿ ನಿಂತು
ಸರ್ವರನ್ನು ಸಮಭಾವದಿಂದ
ಕಂಡ ಜ್ಞಾನಯೋಗಿಯೇ ನಿಮಗೆ ಕೋಟಿ ಕೋಟಿ ನಮನ

ನೀವು
ಅಜ್ಞಾನದ ಅಂಧಕಾರ
ದೂರ ಮಾಡಿ ಎಲ್ಲರ
ಹೃದಯ– ಹೃದಯಗಳಲ್ಲಿ
ಜ್ಞಾನದ ಜ್ಯೋತಿ ಬೆಳಗಿದವರು.
ಎಲ್ಲರಿಗೂ ಮಧುರ ಪ್ರೀತಿಯನ್ನೇ ಹಂಚಿದವರು.
ಆಧ್ಯಾತ್ಮಿಕ ಪ್ರವಚನದ ಮೂಲಕ ಜ್ಞಾನಾಮೃತ ನೀಡಿದ ಜ್ಞಾನಯೋಗಿಯೇ
ನಿಮಗೆ ಕೋಟಿ ಕೋಟಿ ನಮನ

ನಿಮ್ಮ
ಸರಳ ಜೀವನವೇ
ಮನುಕುಲಕೆ ಒಂದು
ಒಳ್ಳೆಯ ಸಂದೇಶ
ಜಗತ್ತಿನ ಎಲ್ಲೆಡೆ
ಆಧ್ಯಾತ್ಮಿಕ ಕಂಪು ಸೂಸಿ
ಬಸವನಾಡಿನ
ಕೀರ್ತಿ ಹೆಚ್ಚಿಸಿದ
ಜ್ಞಾನಯೋಗಿಯೇ
ನಿಮಗೆ ಕೋಟಿ ಕೋಟಿ ನಮನ

**– ದೇವೇಂದ್ರ ಕ. ಹೆಳವರ**
**ಪತ್ರಕರ್ತರು, ವಿಜಯಪುರ.**
**ಮೊ.9900762949**

# ಡಿ.22–23ರಂದು ಕಾಳಿದಾಸನ ಕಾವ್ಯ ರಸಾಸ್ವಾದ & ಸಾಹಿತ್ಯ ಸಂಭ್ರಮ

ವಿಜಯಪುರ: ಕವಿರತ್ನ ಕಾಳಿದಾಸನ ಕಾವ್ಯ ರಸಾಸ್ವಾದ–8, ಸಾಹಿತ್ಯ ಸಂಭ್ರಮ ಹಾಗೂ ಭಾರತೀಯ ಕೃಷಿ ಸಂಸ್ಕೃತಿ ವಿಶೇಷ ಕಾರ್ಯಕ್ರಮವನ್ನು ವಿಜಯಪುರದ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಡಿ.22 ಹಾಗೂ 23 ರಂದು ತೊರವಿ ರಸ್ತೆಯ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪದವಿ ಕಾಲೇಜ ಚೇರಮನ್ ಪ್ರೊ. ವಿ. ಡಿ.ವಸ್ತ್ರದ ಹೇಳಿದರು.

ಸೋಮವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಶ್ರೀ ಸಿದ್ದೇಶ್ವರ ಶ್ರೀಗಳ ಆಶಯದಂತೆ ಪ್ರತಿ ತಿಂಗಳು ದೇಶದ ಸಂಸ್ಕೃತಿ ಉಳಿವಿಗಾಗಿ ಪ್ರತಿ ತಿಂಗಳು ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಅದರಂತೆ ಪ್ರತಿ ವರ್ಷ ಇಂತಹ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಇದರ ಉದ್ಘಾಟನೆಯು 22 ರಂದು ನಡೆಯಲಿದೆ. ಜ್ಞಾನಯೋಗಾಶ್ರಮದ ಅಧ್ಯಕ್ಷ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳ ಪಾವನ ಸಾನಿಧ್ಯದಲ್ಲಿ, ಪರಮಪೂಜ್ಯ ಶ್ರೀ ನಿತ್ಯಾನಂದ ಮಹಾಸ್ವಾಮಿಗಳ ಸಮ್ಮುಖದಲ್ಲಿ ಉದ್ಘಾಟನೆಯನ್ನು ಶ್ರೀ ಸಿದ್ಧಯ್ಯ ಆದ–ಸನಿಕ ಒಡೆಯರು, ಬೀದರ ಇವರು ನಡೆಸಿಕೊಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಎ. ಜಿದ್ದಿ ವಹಿಸಲಿದ್ದಾರೆ ಎಂದರು.

ಕವಿರತ್ನ ಕಾಳಿದಾಸನ ಕಾವ್ಯ ರಸಾಸ್ವಾದ–8 ಮೇಘದೂತ ಖಂಡಕಾವ್ಯದ ಪೂರ್ವಭಾಗದ ಉಪನ್ಯಾಸವನ್ನು ಸಿಕ್ಯಾಬ ಮಹಾವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಶ್ರೀಕೃಷ್ಣ ಕಾಖಂಡಕಿ ಅವರು ನಡೆಸಿಕೊಡಲಿದ್ದಾರೆ. ಮೇಘದೂತ ಖಂಡಕಾವ್ಯದ ಉತ್ತರಭಾಗದ ಉಪನ್ಯಾಸವನ್ನು ಸರ್ವಜ್ಞ ವಿಹಾರ ವಿದ್ಯಾಪೀಠದ ಕುಲಾಧಿಪತಿಗಳಾದ ಪಂ. ಮಧ್ವಾಚಾರ್ಯ ಮೊಕಾಶಿ ಅವರು ಮಾಡಲಿದ್ದಾರೆ. ಜಿ. ಎಚ್. ಮರನೂರ ಎಸ್. ಎಸ್.ಗೌಡಪ್ಪಗೋಳ ಅವರು ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ.

ಸಾಹಿತ್ಯ ಸಂಭ್ರಮದ ಉಪನ್ಯಾಸಗಳನ್ನು ಅನುಭಾವಿ ಕವಿ ಹಲಸಂಗಿ ಮಧುರಚೆನ್ನರ ಕುರಿತು ಇಂಡಿಯ ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ಕೆ. ಕೊಪ್ಪ, ನಿಸರ್ಗ ಕವಿ ವರ್ಡ್ಸವರ್ತ ಕುರಿತು ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯ ಆಂಗ್ಲ ಪ್ರಾಧ್ಯಾಪಕ ಡಾ. ಬಸವರಾಜ ಡೋಣೂರು, ಹಾಗೂ ಬಸವಣ್ಣನವರ ಸಾಮಾಜಿಕ ಚಿಂತನೆಗಳು ಕುರಿತು ಅಶೋಕ ಹಂಚಲಿ ಅವರು ಮಾಡಲಿದ್ದಾರೆ. ಈ ಕಾರ್ಯಕ್ರಮದ ನಿರೂಪಣೆಯನ್ನು ಎಸ್.ಡಿ.ದುರಗಣ್ಣವರ ಎಸ್.ಎನ್.ಪ್ಯಾಟಿಗೌಡರ ನಡೆಸಿಕೊಡಲಿದ್ದಾರೆ.

ಸಾಯಂಕಾಲ ಶ್ರೀ ಸದ್ಗುರು ಪರಂಪರೆ ಸಂಜೆ 6 ರಿಂದ ಸತ್ಸಂಗ ಹಾಗೂ ಭಜನೆ ಹಾಗೂ ಇಂಚಗೇರಿ ಸಂಪ್ರದಾಯ ಕುರಿತು ನಿವೃತ್ತ ಉಪನಿಬಂಧಕರಾದ ಬಿ. ಆರ್. ಬನಸೋಡೆ ಮಾಡಲಿದ್ದಾರೆ.

ಬೆಳಿಗ್ಗೆ ಕಾರ್ಯಕ್ರಮ ಪೂರ್ವ ಮುಂಜಾನೆ 8.30 ಗಂಟೆಗೆ ಶ್ರೀ ಸಿದ್ದೇಶ್ವರ ದೇವಾಲಯದಿಂದ ಕಾಳಿದಾಸ ಶಿಕ್ಷಣ ಸಂಸ್ಥೆಯವರೆಗೆ ವಾರ್ಕರಿ ಭಜನೆ, ಡೊಳ್ಳುವಾದ್ಯ, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯವರ ಜಯಘೋಷದೊಂದಿಗೆ ಶ್ರೀ ಕಾಳಿದಾಸರ, ಸ.ಸ. ಭಾವುಸಾಹೇಬ ಮಹಾರಾಜರ, ಸ.ಸ. ರಾಮರಾವ ಮಹಾರಾಜರ ಮತ್ತು ಸ.ಸ. ರಂಗರಾವ ಮಹಾರಾಜರಭಾವಚಿತ್ರಗಳ ಮೆರವಣಿಗೆ ನಡೆಯಲಿದೆ.

23 ರಂದು ರಾಷ್ಟ್ರೀಯ ರೈತ ದಿನಾಚರಣೆ ನಿಮಿತ್ಯ ಕೃಷಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾಲಯ ವಿಜಯಪುರ ಸಹಯೋಗದಲ್ಲಿ ಭಾರತೀಯ ಕೃಷಿ ಪದ್ಧತಿ ಅಳವಡಿಕೆಯಲ್ಲಿ ಸಂವಾದ ಗೋಷ್ಠಿಯನ್ನು ಆಯೋಜಿಸಲಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಡಾ.ಆರ್.ಬಿ.ಬೆಳ್ಳಿ ಹೇಳಿದರು.

ಆಹಾರ ವಿಷಮುಕ್ತವಾಗುತ್ತಿದೆ ರಾಸಾಯನಿಕ ಬಳಕೆ ಅಧಿಕವಾಗುತ್ತಿದೆ, ಈ ಹಿನ್ನೆಲೆಯಲ್ಲಿ ಸಾಧಕ ರೈತರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಹಾಗೂ ಸಹಜ ಕೃಷಿ ಬಳಕೆ ಮಾಡುವ ಸಂಬಂಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಸಂಧರ್ಭದಲ್ಲಿ 10 ಜನ ಕೃಷಿ ಸಾಧಕ ರೈತರಿಗೆ ನವದೆಹಲಿಯ ಚೇರಮನ್ನರಾದ ಡಾ. ಅಶೋಕ ದಳವಾಯಿ ಅವರಿಂದ ವಿಸ್ಕ ಅಗ್ರೋ ರಾಷ್ಟ್ರೀಯ ರೈತ ಪುರಸ್ಕಾರ ಮಾಡಲಾಗುವುದು. ಇಲ್ಲಿಯೇ 10 ಮಳಿಗೆಗಳನ್ನು ಹಾಕಿ ಕೃಷಿ ವಸ್ತು ಪ್ರದರ್ಶನ ಆಯೋಜಿಸಲಾಗಿದೆ.

23 ರಂದು ಭಾರತೀಯ ಪ್ರಾಚೀನ ಕೃಷಿ ಸಂಸ್ಕೃತಿ ಉದ್ಘಾಟನಾ ಸಮಾರಂಭ ನಡೆಯಲಿದ್ದು ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯ, ಭಾರತ ಸರಕಾರ, ನವದೆಹಲಿಯ ಚೇರಮನ್ನರಾದ ಡಾ. ಅಶೋಕ ದಳವಾಯಿ ಅವರು ಉದ್ಘಾಟನೆಯನ್ನು ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ವಿಲಿಯಂ ರಾಜಶೇಖರ ಆಗಮಿಸಲಿದ್ದಾರೆ. ಆಶಯ ಭಾಷಣ ಲಕ್ಷ್ಮೀಬಾಯಿ ಭಾವುರಾವ ಪಾಟೀಲ ಮಹಿಳಾ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಮಹಾದೇವ ಕೋರಿ ಅವರು ನಡೆಸಿಕೊಡಲಿದ್ದಾರೆ ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಎ. ಜಿದ್ದಿ ವಹಿಸಲಿದ್ದಾರೆ ಎಂದರು.

ವಿಶೇಷ ಉಪನ್ಯಾಸಗಳನ್ನು ಅಭಿಃ ಫೌಂಡೇಶನ್‌ದ ಸಂಸ್ಥಾಪಕ ಬಸವರಾಜ . ಅವರು ಸಾವಯವ ಕೃಷಿ ಕುರಿತು, ಕೃಷಿ ತರಂಗ ಸಂಚಾಲಕರಾದ ಶ್ರೀ ಗಿರೀಶ ಭದ್ರಗೊಂಡ ಅವರು

ರೈತರ ನಡೆ, ವೈಜ್ಞಾನಿಕ ಸಲಕರಣೆಗಳ ಕಡೆ ಕುರಿತು, ಕೃಷಿ ವಿಶ್ವವಿದ್ಯಾಲಯ

ಉಪನ್ಯಾಸಕರಾದ ಡಾ ರಾಜೇಂದ್ರ ಪೋದ್ದಾರ ಅವರು ಮಣ್ಣು ಮತ್ತು ನೀರು ನಿರ್ವಹಣೆ ಹಾಗೂ ಮಳೆ ನೀರು ಕೊಯ್ಲು ಕುರಿತು ಬೆಂಗಳೂ–ರಿನ ಜಲಸಾಕ್ಷರತಾ ಫೌಂಡೇಶನ್ ಸಂಸ್ಥಾಪಕರಾದ ಆಯ್ಯಪ್ಪ ಮಸಗಿ ಅವರು ನಡೆಸಿಕೊಡಲಿದ್ದಾರೆ. ಈ ಕಾರ್ಯಕ್ರಮದ ನಿರೂಪಣೆಯನ್ನು ಎಸ್.ಡಿ.ದುರಗಣ್ಣವರ ಎಸ್.ಎನ್.ಪ್ಯಾಟಿಗೌಡರ ನಡೆಸಿಕೊಡಲಿದ್ದಾರೆ. ಇಲ್ಲಿಯೇ ಎರಡು ದಿನಗಳ ಕಾಲ ಕೃಷಿ ವಸ್ತು ಪ್ರದರ್ಶನ ನಡೆಯಲಿದೆ.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಅಶೋಕ ಎಸ್. ಜಿದ್ದಿಯವರು ಮಾತನಾಡಿ 22–23 ರಂದು ನಡೆಯುವ ಈ ಕಾರ್ಯಕ್ರಮಕ್ಕೆ ರೈತಾಪಿ ಜನ ಹಾಗೂ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ಬಿ. ಆರ್. ಬನಸೋಡೆ, ಕೆ. ಆರ್. ನಾಗೋಡ, ಆರ್.ಬಿ.ಜೊಲ್ಲೆ, ಕೆ. ಬಿ. ಹುಲ್ಲೆಣ್ಣವರ, ಆರ್. ಎಸ್. ವಾಡೇದ, ಎ. ಎಂ. ಬಗಲಿ, ಪಿ. ಎಸ್. ಸಮಗಾರ, ವಿ. ಎಸ್. ಕುಲಕರ್ಣಿ, ಕೆ. ಆರ್. ಜಾಧವ, ಡಿ.ವ್ಹಿ.ಸಾಳುಂಕೆ, ವಿ.ಎಸ್.ಶಿರೋಳ, ಬಿ.ಟಿ.ಜಿದ್ದಿ, ಎಫ್. ಎಚ್.ಮ್ಯಾಗೋಟಿ, ಕೆ.ಎಸ್.ಯಕ್ಕಂಡಿ, ಐ.ಎನ್.ಕಂಬಾರ, ಡಾ। ರಾಜೇಶ್ವರಿ ಜಿದ್ದಿ, ಡಿ.ವಿ.ರಾಜಗಿರಿ, ಎಮ್. ಎನ್. ಕಣಮೇಶ್ವರ, ಎಚ್.ಬಿ. ತಳವಾರ, ಡಿ. ಕೆ. ನಾಗೋಡ ಅವರುಗಳು ಉಪಸ್ಥಿತರಿದ್ದರು.